ಸಂಪಾದಕರು :
ಎಂ.ಎಸ್. ವಿಕಾಸ್

ಮಂಗಳವಾರ, ಫೆಬ್ರವರಿ 13, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 272 RNI : 27369/75

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



## ಕೇಂದ್ರ ಯೋಜನೆ ಫಲಾನುಭವಿಗಳ ಸೆಲ್ಫಿ

**ಯೋಜನೆಗಳ ಅಭಿಪ್ರಾಯ ಹಂಚಿಕೊಂಡ ಪಾಂಡಿಚೇರಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹೇಮಮಾಲಿನಿ**

ದಾವಣಗೆರೆ, ಫೆ.12- ಪಾಂಡಿಚೇರಿ ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹೇಮಾಮಾಲಿನಿ ನಗರದ ಬಿಜೆಪಿ ಜಿಲ್ಲಾ ಕಚೇರಿಗೆ ಸೋಮವಾರ ಭೇಟಿ ನೀಡಿದ್ದರು.

ಅಖಿಲ ಭಾರತೀಯ ಸಂಘಟನಾತ್ಮಕ ಪ್ರವಾಸದ ಅಂಗವಾಗಿ ಆಗಮಿಸಿದ್ದ ಅವರು, 'ಕೇಂದ್ರ ಸರ್ಕಾರದ ಯೋಜನೆಗಳ ಮಹಿಳಾ ಫಲಾನುಭವಿಗಳ ಸೆಲ್ಫಿ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಫಲಾನುಭವಿಗಳೊಂದಿಗೆ ಮಾನಾಡಿದರು.

ವಿವಿಧ ಯೋಜನೆಗಳ ಫಲಾನುಭವಿಗಳು ಹಾಗೂ ಬಿಜೆಪಿ ಕಾರ್ಯಕರ್ತೆಯರು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಯೋಜನೆಗಳಿಂದಾದ ಪ್ರಯೋಜನಗಳ ಬಗ್ಗೆ ಅಭಿಪ್ರಾಯ ಹಂಚಿಕೊಂಡರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮಹಿಳೆಯರು ಕೇಂದ್ರ ಸರ್ಕಾರದ ಯೋಜನೆಗಳಿಂದಾದ ಪ್ರಯೋಜನದ (2ನೇ ಪುಟಕ್ಕೆ)

## ದೆಹಲಿ ಚಲೋ : ರೈತರ ಜೊತೆ ಸಚಿವರ ಮಾತುಕತೆ

**ದೆಹಲಿ ಕಡೆ ಹೊರಟ ರೈತರ ಟ್ರ್ಯಾಕ್ಟರ್‌ಗಳು**

ನವದೆಹಲಿ, ಫೆ. 12 – ದೆಹಲಿ ಚಲೋ ಪ್ರತಿಭಟನೆಯನ್ನು ಕೈ ಬಿಡುವಂತೆ ರೈತ ಮುಖಂಡರ ಜೊತೆ ಕೇಂದ್ರ ಸಚಿವರ ತಂಡ ಚಂಡೀಘಡದಲ್ಲಿ ಮಾತುಕತೆ ನಡೆಸಿದೆ. ಈ ನಡುವೆಯೇ, ಪಂಜಾಬ್‌ನ ವಿವಿಧ ಭಾಗಗಳಿಂದ ರೈತರು ಟ್ರ್ಯಾಕ್ಟರ್‌ಗಳಲ್ಲಿ ದೆಹಲಿ ಕಡೆ ತೆರಳಿದ್ದಾರೆ.

ದೆಹಲಿಯ ಸಿಘು, ಟಿಕ್ರಿ ಹಾಗೂ ಘಾಜಿಪುರ ಗಡಿಗಳಲ್ಲಿ ವ್ಯಾಪಕ ಬಂದೋಬಸ್ತ್ ಮಾಡಲಾಗಿದ್ದು, ಹಲವು ಸುತ್ತುಗಳ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದೆ.

200ಕ್ಕೂ ಹೆಚ್ಚು ರೈತ ಸಂಘಟನೆಗಳು ಈ ಪ್ರತಿಭಟನೆಗೆ ಬೆಂಬಲಿಸಿವೆ ಎಂದು ಸಂಯುಕ್ತ ಕಿಸಾನ್ ಮೋರ್ಚಾ ಹಾಗೂ ಕಿಸಾನ್ ಮಜ್ದೂರ್ ಮೋರ್ಚಾ ತಿಳಿಸಿವೆ.

ರೈತರ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆಯ ಗ್ಯಾರಂಟಿ ಕಾಯ್ದೆ ಜಾರಿಗೆ ತರಬೇಕು ಎಂದು ರೈತ ಸಂಘಟನೆಗಳು ಒತ್ತಾಯಿಸುತ್ತಿವೆ.

ಇದರ ಜೊತೆಗೆ ಸ್ವಾಮಿನಾಥನ್ ಆಯೋಗದ ಶಿಫಾರಸ್ಸುಗಳನ್ನು ಜಾರಿಗೆ ತರಬೇಕು, ರೈತರು ಹಾಗೂ ಕೃಷಿ ಕಾರ್ಮಿಕರಿಗೆ ಪಿಂಚಣಿ ನೀಡಬೇಕು, ಕೃಷಿ ಸಾಲ ಮನ್ನಾ ಮಾಡಬೇಕು, ರೈತರ ವಿರುದ್ಧ ಪೊಲೀಸ್ ಪ್ರಕರಣಗಳನ್ನು ವಾಪಸ್ ಪಡೆಯಬೇಕು, ಲಖೀಂಪುರ್ ಖೇರಿ ಹಿಂಸಾಚಾರದ ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕು,

2013ರ ಜಮೀನು ವಶ ಕಾಯ್ದೆ ಮತ್ತೆ ಜಾರಿಗೆ ತರಬೇಕು, ವಿಶ್ವ (2ನೇ ಪುಟಕ್ಕೆ)

# 1.2 ಕೋಟಿ ಕುಟುಂಬ ಬಡತನದಿಂದ ಮುಕ್ತಿ



**ರಾಜ್ಯಪಾಲರ ಭಾಷಣದಲ್ಲಿ ಸರ್ಕಾರದ ಗ್ಯಾರಂಟಿ ವಿವರ**

ಬೆಂಗಳೂರು, ಫೆ. 12 - ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ 1.2 ಕೋಟಿಗೂ ಹೆಚ್ಚು ಕುಟುಂಬಗಳು ಬಡತನ ರೇಖೆಯಿಂದ ಹೊರಬಂದು ಮಧ್ಯಮ ವರ್ಗದ ಆರ್ಥಿಕ ಸ್ಥಿತಿಗೆ ಏರಿದ್ದಾರೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಇಂದು ವಿಧಾನಮಂಡಲಕ್ಕೆ ತಿಳಿಸಿದ್ದಾರೆ.

ಉಭಯ ಸದನಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಬರ ಪರಿಹಾರ ನೀಡದಿದ್ದರೂ, ಸಂಕಷ್ಟ ಸನ್ನಿವೇಶದಲ್ಲಿ ರಾಜ್ಯ ನೀಡಿದ ನೆರವಿನಿಂದ ಬಡವರು ಮತ್ತು ರೈತರಿಗೆ ತೊಂದರೆಯಾಗಲಿಲ್ಲ ಎಂದರು.

ನನ್ನ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ನಿರ್ಣಯದಿಂದ ರಾಜ್ಯದ ಐದು ಕೋಟಿಗೂ ಹೆಚ್ಚು ಜನರು ಮಧ್ಯಮ ವರ್ಗದ ಸ್ಥಿತಿಗೆ ಏರಿರುವುದು ಜಾಗತಿಕ ದಾಖಲೆಯಾಗಿದೆ ಎಂದು ಹೇಳಿದರು.

ಖಾತರಿ ಯೋಜನೆಗಳ ಮೂಲಕ ಜನರ ಜೀವನದಲ್ಲಿ ಪರೋಕ್ಷವಾಗಿ ಗಮನಾರ್ಹ ಬದಲಾವಣೆಗಳಾಗಿವೆ. ರಾಜ್ಯದಲ್ಲಿ ಬರಗಾಲವಿದ್ದರೂ ಕಳೆದ ವರ್ಷಕ್ಕಿಂತ ಈ ವರ್ಷ ರೈತರ ಆತ್ಮಹತ್ಯೆ ಪ್ರಮಾಣ ಕಡಿಮೆಯಾಗಿದೆ ಎಂದಿದ್ದಾರೆ. ರಾಜ್ಯಪಾಲರ ಮೂಲಕ ಗ್ಯಾರಂಟಿ ಯೋಜನೆಗಳನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿರುವ ಸರ್ಕಾರ ಕೇಂದ್ರವನ್ನು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡಿದೆ.

ಮುಂದುವರೆದು ಮಾತನಾಡಿದ ರಾಜ್ಯಪಾಲರು, ಕರ್ನಾಟಕವು ರಾಷ್ಟ್ರದಲ್ಲಿಯೇ ಒಂದು ಮಾದರಿ ರಾಜ್ಯ, ಇಲ್ಲಿ ಜಾರಿಗೆ ತರುವ ಹಲವು ಪ್ರಗತಿಪರ ಯೋಜನೆಗಳು ವಿವಿಧ ರಾಜ್ಯಗಳಿಗೆ ಮಾದರಿಯಾಗಿವೆ ಎಂದು ತಿಳಿಸಿದ್ದಾರೆ.

ಸರ್ಕಾರ ತಂದಿರುವ ಪಂಚ ಯೋಜನೆಗಳು ಕರ್ನಾಟಕದ ಸಮಸ್ತ ಜನತೆಯ ಪಾಲಿಗೆ ಸಂತೃಪ್ತಿಯ ಮತ್ತು ನೆಮ್ಮದಿಯ ನಾಳೆಗಳನ್ನು ತರುವ ಉದ್ದೇಶ ಹೊಂದಿವೆ. ನಮ್ಮ ನೀತಿಗಳಲ್ಲಿ ಹೊಸತನವನ್ನು ಅಳವಡಿಸಿಕೊಳ್ಳಲಾಗಿದೆ.

ಶಕ್ತಿ ಯೋಜನೆಯಿಂದ ಇದುವರೆಗೂ 3.5 ಕೋಟಿ ಮಹಿಳೆಯರು ಜಾತಿ, ಧರ್ಮ ಭೇದವಿಲ್ಲದೆ 150 ಕೋಟಿಗೂ ಹೆಚ್ಚು ಟ್ರಿಪ್‌ಗಳಲ್ಲಿ ಪ್ರಯಾಣಿಸಿದ್ದಾರೆ.

ಅನ್ನಭಾಗ್ಯ ಯೋಜನೆಯಡಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ವಯ ವಿತರಿಸಲಾಗುವ ಐದು ಕೆಜಿ ಅಕ್ಕಿ ಜೊತೆಗೆ ರಾಜ್ಯ ಸರ್ಕಾರ ಐದು ಕೆಜಿ ಅಕ್ಕಿ ಬದಲಾಗಿ ಪ್ರತಿ ಕೆಜಿಗೆ 34 ರಂತೆ ಐದು ಕೆಜಿ ಅಕ್ಕಿಯ ಹಣವನ್ನು ಫಲಾನುಭವಿ ಖಾತೆಗೆ ವರ್ಗಾಯಿಸಲಾಗಿದೆ.

ಕಳೆದ ಏಳು ತಿಂಗಳಲ್ಲಿ 4,595 ಕೋಟಿ ರೂ. ಅರ್ಹ ಫಲಾನುಭವಿಗಳಿಗೆ ಹಣ ವರ್ಗಾವಣೆ ಮಾಡಿ ಅವರ ಆರ್ಥಿಕ ಸ್ಥಿತಿಯನ್ನು ಮೇಲಕ್ಕೆತ್ತಲಾಗಿದೆ. (4ನೇ ಪುಟಕ್ಕೆ)

## ಮಧ್ಯ ಪ್ರದೇಶದಲ್ಲಿ ಕರ್ನಾಟಕದ 70 ರೈತರು ಪೊಲೀಸರ ವಶಕ್ಕೆ

ಭೂಪಾಲ್, ಫೆ. 12 – ದೆಹಲಿ ಚಲೋ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ತೆರಳಿದ್ದ ಕರ್ನಾಟಕದ ಕನಿಷ್ಠ 70 ರೈತರನ್ನು ಮಧ್ಯ ಪ್ರದೇಶದ ಭೂಪಾಲ್ ರೈಲ್ವೆ ನಿಲ್ದಾಣದಲ್ಲಿ ರಾಜ್ಯ ರೈಲ್ವೇ ಪೊಲೀಸರು ವಶಕ್ಕೆ ತೆಗೆದುಕೊಂಡಿದ್ದಾರೆ.

ದೆಹಲಿಗೆ ತೆರಳುತ್ತಿರುವ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ರೈಲಿನಿಂದ ಅವರನ್ನು ಕೆಳಗಿಳಿಸಲಾಯಿತು. ನಂತರ ಅವರನ್ನು ಜಿಲ್ಲಾಡಳಿತದ ವಶಕ್ಕೆ (2ನೇ ಪುಟಕ್ಕೆ)

## ತಮಿಳುನಾಡು : ನಿಮಿಷಗಳಲ್ಲೇ ಮಾತು ಮುಗಿಸಿದ ರಾಜ್ಯಪಾಲರು

ಚೆನ್ನೈ, ಫೆ. 12 – ತಮಿಳುನಾಡು ರಾಜ್ಯಪಾಲ ಆರ್. ಎನ್. ರವಿ ಅವರು ಸದನವನ್ನು ಉದ್ದೇಶಿಸಿ ತಮ್ಮ ಮಾತುಗಳನ್ನು ಕೆಲವೇ ನಿಮಿಷಗಳಲ್ಲಿ ಪೂರ್ಣಗೊಳಿಸಿದ್ದಾರೆ. ಈ ವೇಳೆ ಅವರು ಆಡಿದ ಕೆಲ ಮಾತುಗಳನ್ನು ಕಡತದಿಂದ ತೆಗೆದು ಹಾಕಲಾಗಿದೆ. (4ನೇ ಪುಟಕ್ಕೆ)

## ಕಾರ್ಯಕರ್ತರ ಸಲಹೆಯಂತೆ ರಾಷ್ಟ್ರೀಯ ಪಕ್ಷ ಸೇರಲು ಎಚ್.ಪಿ. ರಾಜೇಶ್ ನಿರ್ಧಾರ




**ಜಗಳೂರು : ಸ್ವಾಭಿಮಾನಿ ಕಾರ್ಯಕರ್ತರ ಸಮಾಲೋಚನಾ ಸಭೆಯಲ್ಲಿ ಮಾಜಿ ಶಾಸಕ**

ಜಗಳೂರು, ಫೆ.12- ಸ್ವಾಭಿಮಾನಿ ಕಾರ್ಯ ಕರ್ತರ ಮುಂದಿನ ಭವಿಷ್ಯದ ದೃಷ್ಟಿಯಿಂದ ನಾನು ಯಾವುದಾದರೂ ರಾಷ್ಟ್ರೀಯ ಪಕ್ಷಕ್ಕೆ ಸೇರಲು ನಿರ್ಧರಿಸಿದ್ದು ಕಾರ್ಯಕರ್ತರು, ಮುಖಂಡರು ಮತ್ತು ಅಭಿಮಾನಿಗಳ ಸಲಹೆ ಯಂತೆ ಶೀಘ್ರವಾಗಿ ತೀರ್ಮಾನ ಕೈಗೊಳ್ಳುವುದಾಗಿ ಮಾಜಿ ಶಾಸಕ ಎಚ್.ಪಿ.ರಾಜೇಶ್ ತಿಳಿಸಿದರು.

ಪಟ್ಟಣದ ವಾಲ್ಮೀಕಿ ಸಮುದಾಯ ಭವನದಲ್ಲಿ ಸೋಮವಾರ ನಡೆದ ಸ್ವಾಭಿಮಾನಿ ಕಾರ್ಯಕರ್ತರ ಸಮಾಲೋಚನೆ ಸಭೆಯಲ್ಲಿ ಅವರು ಮಾತನಾಡಿದರು.

ಹತ್ತು ವರ್ಷ ಪಕ್ಷ ನಿಷ್ಠೆಯಿಂದ ಹಳ್ಳಿ-ಹಳ್ಳಿಗಳನ್ನು ಸುತ್ತಿ ಕೆಲಸ ಮಾಡಿದ್ದೇನೆ. ಆದರೂ ನನಗೆ ಕಾಂಗ್ರೆಸ್ ಪಕ್ಷದಲ್ಲಿ ಟಿಕೆಟ್ ಕೈತಪ್ಪಿತು. ಕೆಲವೇ ಮತಗಳ ಅಂತರದಲ್ಲಿ ಸೋಲು ಅನುಭವಿಸಿದೆ. ಆದರೆ ನಾನು ತಾಂತ್ರಿಕವಾಗಿ ಸೋತರೂ ಜನರ ಹೃದಯ ಗೆದ್ದಿದ್ದೇನೆ ಎಂದರು.

ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೆ. ಎರಡೂ ರಾಷ್ಟ್ರೀಯ ಪಕ್ಷಗಳಿಗೆ ಪೈಪೋಟಿ ನಡೆಸಿದೆ. ಸ್ವಾಭಿಮಾನಿ ಕಾರ್ಯಕರ್ತರ ವ್ಯಾಪಕ ಬೆಂಬಲದಿಂದ ಹೆಚ್ಚು ಮತ ಪಡೆದೆ. ಆದಾಗ್ಯೂ ಕೇವಲ 1250 (4ನೇ ಪುಟಕ್ಕೆ)






# ಭಕ್ತರ ಬದುಕನ್ನು ಸುಂದರಗೊಳಿಸಲು ಸತ್ಸಂಗ ಸಹಕಾರಿ

## ಯಲವಟ್ಟಿ : ಗುರುಸಿದ್ಧಾಶ್ರಮದ ಸತ್ಸಂಗ ಕಾರ್ಯಕ್ರಮದಲ್ಲಿ ಪ್ರವಚನಕಾರ ಸಿದ್ದೇಶ್ ಅಭಿಮತ



ಮಲೇಬೆನ್ನೂರು, ಫೆ. 12- ವೇದಾಂತ ಎಂದರೆ ಎಲ್ಲವನ್ನು ಬಿಡುವುದು ಎಂಬರ್ಥ ಅಲ್ಲ. ಮನುಷ್ಯನನ್ನು ಮಾನಸಿಕವಾಗಿ ಸಬಲೀಕರಣಗೊಳಿಸುವುದೇ ವೇದಾಂತವಾಗಿದೆ ಎಂದು ಪ್ರವಚನಕಾರ ಹೊಳೆಸಿರಿಗೆರೆಯ ಸಿದ್ದೇಶ್ ಅಭಿಪ್ರಾಯಪಟ್ಟರು.

ಅವರು ಯಲವಟ್ಟಿ ಗ್ರಾಮದ ಶ್ರೀ ಗುರುಸಿದ್ಧಾಶ್ರಮದಲ್ಲಿ ಅವರಾತ್ರಿ ಅಮಾವಾಸ್ಯೆ ಪ್ರಯುಕ್ತ ಹಮ್ಮಿಕೊಂಡಿದ್ದ ಸತ್ಸಂಗ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಪ್ರಾರಬ್ಧ, ಕರ್ಮ ಸಿದ್ಧಾಂತದ ಅರಿವು ಮನುಷ್ಯನಿಗೆ ಆಗಬೇಕು. ನಾವು ಮಾಡುವ ಪಾಪ-ಪುಣ್ಯಗಳೇ ನಮ್ಮ ಸುಖ-ದುಃಖಗಳಿಗೆ ಕಾರಣವಾಗಲಿದ್ದು, ಮಾಡಿದ ಪುಣ್ಯದ ಕೆಲಸಗಳು ಎಂದಿಗೂ ನಮ್ಮನ್ನು ಕೈಬಿಡುವುದಿಲ್ಲ. ಹಾಗಾಗಿ ಸದ್ವಿಚಾರ, ಒಳ್ಳೆಯ ಚಿಂತನೆಗಳನ್ನು ಮೈಗೂಡಿಸಿಕೊಳ್ಳೋಣ ಎಂದು ಸಿದ್ದೇಶ್ ಹೇಳಿದರು.

ಕುಂಬಳೂರಿನ ಬಿ. ಹನುಮಂತಪ್ಪ ಮಾತನಾಡಿ, ಆತ್ಮಜ್ಯೋತಿ ನಿರಾಕಾರವಾದ ಶಕ್ತಿ ಹೊಂದಿದ್ದು, ದೇಹಕ್ಕೆ ಮೈಲಿಗೆ ಉಂಟು, ಆತ್ಮಕ್ಕೆ ಮೈಲಿಗೆ ಇಲ್ಲ ಎಂದು ಶರಣರು ನಮಗೆ ತಿಳಿಸಿಕೊಟ್ಟಿದ್ದರೂ, ನಾವು ಮಾತ್ರ ಬದಲಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಶ್ರೀ ಯೋಗಾನಂದ ಸ್ವಾಮೀಜಿ ಆಶೀರ್ವಚನ ನೀಡಿ, ಕೂಡಿ ಬಾಳಿದರೆ ಸ್ವರ್ಗ ಸುಖ ಎಂಬುದು ಇದೀಗ ಚಿಕ್ಕ ಸಂಸಾರ ಸುಖ ಸಂಸಾರಕ್ಕೆ ಆಧಾರ ಎಂಬಂತಾಗಿದ್ದು, ಮೃದುತ್ವ, ಸೌಜನ್ಯ, ಸಂಸ್ಕಾರ ಹಾಗೂ ಸಾಮರಸ್ಯವನ್ನು ಬೆಳೆಸುವ ಶಕ್ತಿ ಅಧ್ಯಾತ್ಮಕ್ಕೆ ಮಾತ್ರ ಇದೆ ಎಂದು ಪ್ರತಿಪಾದಿಸಿದರು.

ನಿವೃತ್ತ ಶಿಕ್ಷಕ ಬಸಪ್ಪ ಮೇಷ್ಟ್ರು, ಹಿರಿಯರಾದ ವೇದಮೂರ್ತಿ ರೇವಣಸಿದ್ದಯ್ಯ, ಮಾಳಗಿ ಪರಮೇಶ್ವರಪ್ಪ ಪಿಎಸಿಎಸ್ ಸಿಇಓ ಶೇಖರಪ್ಪ, ಪತ್ರಕರ್ತ ಜಿಗಳಿ ಪ್ರಕಾಶ್, ಪ್ರಗತಿಪರ ಕೃಷಿಕ ಕುಂದೂರು ಮಂಜಪ್ಪ ಅವರುಗಳು ದೀಪ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದರು.

ಹೊಳೆಸಿರಿಗೆರೆಯ ಮಾಳಗಿ ಕೊಟ್ರಪ್ಪ ಮತ್ತು ಕುಟುಂಬದವರು ಈ ದಿನದ ದಾಸೋಹಿಗಳಾಗಿದ್ದರು. ಹಳೇಬಾತಿ ಈಶ್ವರಪ್ಪ, ಬಾವಿಕಟ್ಟೆ ಮಲ್ಲೇಶಪ್ಪ, ಎ. ಸುರೇಶ್, ಹೊರಟ್ಟಿ ಕರಿಬಸಪ್ಪ, ಡಿ. ರಾಜಪ್ಪ, ನಿವೃತ್ತ ಯೋಧ ಶಿವಕುಮಾರ್, ಮಾಗೋಡು ಮಂಜಪ್ಪ, ಮಾಗೋಡ ಸಿದ್ದಪ್ಪ, ಮಲ್ಲಾಡರ ಕೃಷ್ಣಪ್ಪ, ಹನುಮಂತಗೌಡ, ನಿಬಗೂರು ದೇವರಾಜ್, ಕರಿಬಸಪ್ಪ, ಐಗೂರು ಪುಷ್ಪಮ್ಮ, ಕುಂಬಳೂರಿನ ಗೋಪಾಲಪ್ಪ, ಕೆ. ಪರಮೇಶ್ವರಪ್ಪ, ಹೆಚ್. ಎಂ. ಸದಾಶಿವ, ಜಿಗಳಿ ಭಜನಾ ತಂಡದ ಕೆ.ಎಸ್. ಮಾಲತೇಶ, ಎ.ಕೆ. ಜಯ್ಯಪ್ಪ, ಆರೋಗ್ಯ ಇಲಾಖೆಯ ಚಂದ್ರಶೇಖರಯ್ಯ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

ಹೊಳೆಸಿರಿಗೆರೆಯ ಕವನಶ್ರೀ, ವೆಂಕಟೇಶ್‌ಗೌಡ, ಕುಂಬಳೂರಿನ ಕೆ. ಕುಬೇರಪ್ಪ ಅವರ ಭಕ್ತಿ ಹಾಡುಗಳು ಗಮನ ಸೆಳೆದವು.

# ಮಹಿಳೆಯರು ಮುಖ್ಯ ವಾಹಿನಿಗೆ ಬರಲಿ

## ಕೊಟ್ಟೂರು ತಹಶೀಲ್ದಾರ್ ಜಿ.ಕೆ. ಅಮರೇಶ್ ಆಶಯ



ಕೊಟ್ಟೂರು, ಫೆ. 12 - ಯೋಜನಾ ವ್ಯಾಪ್ತಿಯಲ್ಲಿ 25 ಮಹಿಳಾ ಜ್ಞಾನ-ವಿಕಾಸ ಕೇಂದ್ರಗಳ ತಾಲ್ಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ನಡೆಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಕೊಟ್ಟೂರು ಆರಕ್ಷಕ ಸರ್ಕಲ್ ಇನ್‌ಸ್ಪೆಕ್ಟರ್ ಟಿ. ವೆಂಕಟಸ್ವಾಮಿ ಅವರು ನೆರವೇರಿಸಿ, ಯಾವುದೇ ಸರ್ಕಾರ ಮಾಡದಿರುವ ಕೆಲಸವನ್ನು ಇಂದು ಧರ್ಮಸ್ಥಳ ಯೋಜನೆಯು ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುತ್ತಿದ್ದು, ಈ ಕಾರ್ಯಗಳಲ್ಲಿ ಭಾಗಿಯಾಗುವುದು ಪುಣ್ಯವೇ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜೀವ ನಗರ ದುರ್ಗಾಂಬಿಕ ಜ್ಞಾನ ವಿಕಾಸ ಕೇಂದ್ರದ ಅಧ್ಯಕ್ಷರಾದ ಶ್ರೀಮತಿ ಎಚ್.ಕೆ. ಡಿಸೋಜಾ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಲ್ಯಾಣ ಕರ್ನಾಟಕ ಪ್ರಾದೇಶಿಕ ಕಚೇರಿಯ ಪ್ರಾದೇಶಿಕ ನಿರ್ದೇಶಕ ಬಿ. ಗಣೇಶ್ ಭಾಗವಹಿಸಿದ್ದರು. ಇವರು ಪ್ರಸ್ತುತ ದಿನಗಳಲ್ಲಿ ಮಹಿಳೆಯರು ಎಲ್ಲಾ ರಂಗಗಳಲ್ಲಿಯೂ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಜೊತೆಗೆ ಕುಟುಂಬವನ್ನು ಅಭಿವೃದ್ಧಿಯ ಪಥದತ್ತ ಕೊಂಡೊಯ್ಯುತ್ತಿದ್ದಾರೆ. ಅಲ್ಲದೆ ಉಳಿತಾಯ, ಶಿಕ್ಷಣ, ಆರ್ಥಿಕ ನಿರ್ವಹಣೆ ಮತ್ತು ಸ್ವಚ್ಛತೆ, ಶಿಸ್ತು, ಕೌಟುಂಬಿಕ ಜೀವನದಲ್ಲಿ ಸಂಸ್ಕೃತಿ ಮತ್ತು ಸಂಸ್ಕಾರದ ಜ್ಞಾನವನ್ನು ನೀಡುವ ಕಾರ್ಯಕ್ರಮವೇ ಜ್ಞಾನ ವಿಕಾಸ ಕಾರ್ಯಕ್ರಮ ಎಂದು ಹೇಳಿದರು.

ತಹಶೀಲ್ದಾರ್ ಜಿ.ಕೆ. ಅಮರೇಶ್ ಅವರು ಮಾತನಾಡಿ, ಮಹಿಳೆಯರು ಸಮಾಜದ ಮುಖ್ಯ ವಾಹಿನಿಗೆ ಬರುವಂತಾಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ವಿಜಯನಗರ ಜಿಲ್ಲೆಯ ಜಿಲ್ಲಾ ನಿರ್ದೇಶಕ ಸತೀಶ್ ಶೆಟ್ಟಿ ಜನಜಾಗೃತಿ ವೇದಿಕೆ ಸದಸ್ಯರು ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಎಚ್ ವಿಶ್ವೇಶ್ವರ ಸಜ್ಜನ್ ಹಾಗೂ ಶ್ರೀಮತಿ ಡಾ. ಕುಸುಮ ಸಜ್ಜನ್ ಅವರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಎಚ್. ವಿಶ್ವೇಶ್ವರ ಸಜ್ಜನ್ ಅವರು ನಿತ್ಯ ಆಹಾರದಲ್ಲಿ ಸಿರಿ ಧಾನ್ಯ ಬಳಸುವುದರಿಂದ ಆರೋಗ್ಯ ವೃದ್ಧಿಯಾಗುತ್ತದೆ ಎಂದು ತಿಳಿಸಿದರು.

ಡಾ. ಕುಸುಮಾ ಸಜ್ಜನ್ ಅವರು ಕುಟುಂಬದ ಆರ್ಥಿಕ ನಿರ್ವಹಣೆಯಲ್ಲಿ ಮಹಿಳೆಯ ಪಾತ್ರ ಬಹು ಮುಖ್ಯವಾಗಿದ್ದು ತಮ್ಮ ಪಾತ್ರಕ್ಕೆಕನುಗುಣವಾಗಿ ಎಲ್ಲ ಜವಾಬ್ದಾರಿಯನ್ನು ನಿರ್ವಹಿಸಿಕೊಂಡು ಹೋಗುತ್ತಾಳೆ ಎಂದು ಹೇಳಿದರು.



## ಹರಪನಹಳ್ಳಿ : ಹೊಸಕೋಟೆ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಸಿದ್ದೇಶ್

ಹರಪನಹಳ್ಳಿ, ಫೆ.12- ತಾಲ್ಲೂಕಿನ ಹೊಸಕೋಟೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಕೆ.ಆರ್.ಸಿದ್ದೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಕೆ.ನಾಗರಾಜ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕೆ.ಆರ್.ಸಿದ್ದೇಶ್ ಒಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು ಎಂದು ಚುನಾವಣಾಧಿಕಾರಿ ಬಿ. ಮಾನಸ ತಿಳಿಸಿದರು.

ನೂತನ ಅಧ್ಯಕ್ಷ ಕೆ.ಆರ್.ಸಿದ್ದೇಶ್ ಮಾತನಾಡಿ, ಸಂಘದಿಂದ ರೈತರಿಗೆ ಸಕಾಲದಲ್ಲಿ ಬೀಜ-ಗೊಬ್ಬರ, ಸಾಲ-ಸೌಲಭ್ಯ ಒದಗಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ಬಿ.ನಾಗಪ್ಪ, ಸದಸ್ಯರಾದ ಹೆಚ್. ಶರಣಪ್ಪ, ಎಸ್.ಜಾತಪ್ಪ, ಹೆಚ್.ಕೊಟ್ರೇಶಪ್ಪ, ಜಿ.ಎಂ.ವನಜಾಕ್ಷಿ, ಹೆಚ್.ಎಸ್. ಗೌರಮ್ಮ, ಆರ್.ಕೊಟ್ರೇಶ್, ಎಸ್.ಎ.ಜ್ಯೋತಿರ್ಲಿಂಗ, ಜಿ.ಸಿದ್ದೇಶ್, ಹೆಚ್. ರಾಮಪ್ಪ, ಸಂಘದ ಕಾರ್ಯನಿರ್ವಹಣಾಧಿಕಾರಿ ಕೆ.ಭೀಮಪ್ಪ, ಸಿಬಂದಿ ಇದ್ದರು.

# ಸವಳಂಗ ಪ್ರಾಥಮಿಕ ಕೃಷಿ ಪತ್ತಿನ ಸಂಘಕ್ಕೆ ನಾಲ್ವರು ನಿರ್ದೇಶಕರ ಅವಿರೋಧ ಆಯ್ಕೆ



ನ್ಯಾಮತಿ, ಫೆ.12- ತಾಲ್ಲೂಕಿನ ಸವಳಂಗ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಐದು ವರ್ಷದ ಅವಧಿಗೆ ನಾಲ್ವರು ನಿರ್ದೇಶಕರ ಅವಿರೋಧ ಆಯ್ಕೆ ನಡೆದು ಎಂಟು ನಿರ್ದೇಶಕರು ಚುನಾವಣೆ ಮೂಲಕ ಆಯ್ಕೆಯಾಗಿರುವುದಾಗಿ ಚುನಾವಣಾಧಿಕಾರಿ ನವೀನ್ ಕುಮಾರ್ ಘೋಷಿಸಿದರು.

ಸವಳಂಗ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ 342 ಸದಸ್ಯರನ್ನು ಹೊಂದಿದ್ದು, ಇದರಲ್ಲಿ 330 ಸದಸ್ಯರು ತಮ್ಮ ಹಕ್ಕನ್ನು ಚಲಾವಣೆ ಮಾಡಿದ್ದಾರೆ.

ಹಿಂದುಳಿದ 'ಎ' ಮೀಸಲು ಕ್ಷೇತ್ರದಿಂದ ಎನ್.ಸುರೇಶಾಚಾರಿ, 'ಬ' ಮೀಸಲು ಕ್ಷೇತ್ರದಿಂದ ಎಸ್.ಪ್ರಭುದೇವ್, ಪರಿಶಿಷ್ಟ ಪಂಗಡದ ಮೀಸಲು ಕ್ಷೇತ್ರದಿಂದ ಎ.ಬಿ.ರಂಗಪ್ಪ, ಸಾಲಗಾರರಲ್ಲದ ಸಾಮಾನ್ಯ ಕ್ಷೇತ್ರಕ್ಕೆ ಎ. ಷಣ್ಮುಖಪ್ಪ ಇವರು ಅವಿರೋಧವಾಗಿ ಆಯ್ಕೆಯಾಗಿದ್ದರು.

ಉಳಿದ 8 ಸ್ಥಾನಕ್ಕೆ 23 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಸಾಮಾನ್ಯ ಕ್ಷೇತ್ರದಿಂದ ಎಂ.ಜಿ. ಕರಿಬಸಪ್ಪ, ಎಂ.ರಾಜಪ್ಪ, ಎಂ.ಜಿ.ಷಣ್ಮುಖಪ್ಪ, ಡಿ.ಹೆಚ್.ಲೋಕಪ್ಪ, ಮಹಿಳಾ ಮೀಸಲು ಕ್ಷೇತ್ರದಿಂದ ಯಶೋಧಮ್ಮ ಮಲ್ಲೇಶಪ್ಪ, ಕೆ.ಎಸ್.ವೀರಮ್ಮ, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಶಾಂತಾನಾಯ್ಕ ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ ನವೀನ್ ಕುಮಾರ್ ಘೋಷಿಸಿ, ಪ್ರಮಾಣ ಪತ್ರ ವಿತರಿಸಿದರು. ಚುನಾವಣೆಯ ಕಾರ್ಯದಲ್ಲಿ ಕಾರ್ಯದರ್ಶಿ ಹೆಚ್.ಜಿ.ಗಣೇಶ್ ಸೇರಿದಂತೆ ಇತರರಿದ್ದರು.

## ದೆಹಲಿ ಚಲೋ : ರೈತರ ಜೊತೆ ಸಚಿವರ ಮಾತುಕತೆ

**(1ನೇ ಪುಟದಿಂದ)** ಆರೋಗ್ಯ ಸಂಘಟನೆಯಿಂದ ಹೊರ ಬರಬೇಕು ಹಾಗೂ 2020ರ ಪ್ರತಿಭಟನೆಯಲ್ಲಿ ಸಾವನ್ನಪ್ಪಿದ ರೈತ ಕುಟುಂಬಗಳಿಗೆ ಪರಿಹಾರ ನೀಡಬೇಕು ಎಂದು ರೈತ ಸಂಘಟನೆಗಳು ಒತ್ತಾಯಿಸುತ್ತಿವೆ.

## ನಗರದ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರೆಯ ಹಂದರ ಕಂಬ ಪೂಜೆ ಇಂದು



ಶ್ರೀ ದುರ್ಗಾಂಬಿಕಾ ದೇವಿಯ ಜಾತ್ರೆ ಪ್ರಯುಕ್ತ ಹಂದರ ಕಂಬ ಪೂಜಾ ಕಾರ್ಯಕ್ರಮವು ಇಂದು ಬೆಳಿಗ್ಗೆ 10.30ಕ್ಕೆ ನೆರವೇರಲಿದೆ. ದೇವಸ್ಥಾನ ಪುರೋಹಿತ ನಾಗರಾಜ್ ಜೋಯಿಸ್ ಪೂಜೆಯನ್ನು ನಡೆಸಿಕೊಡಲಿದ್ದಾರೆ. ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರು ಉಪಸ್ಥಿತರಿರುವರು ಎಂದು ಧರ್ಮದರ್ಶಿ ಗೌಡ್ರ ಚನ್ನಬಸಪ್ಪ ತಿಳಿಸಿದ್ದಾರೆ.

# ಹರಪನಹಳ್ಳಿ : ನಾವೆಲ್ಲರೂ ಒಂದು ಎಂಬ ಮನೋಭಾವದಿಂದ ರಾಷ್ಟ್ರೀಯ ಭಾವೈಕ್ಯತೆ ಸಾಧ್ಯ



ಹರಪನಹಳ್ಳಿ, ಫೆ. 12- ರಾಷ್ಟ್ರದ ಹಿತಾಸಕ್ತಿ ಸಾಧಿಸಿ ಅಭಿವೃದ್ಧಿ ಹೊಂದಲು ಜನರು ನಾವೆಲ್ಲಾ ಒಂದು ಎಂಬ ಭಾವನೆ ಬೆಳೆಸಲು ಭಾವೈಕ್ಯತೆ ಅಗತ್ಯ ಎಂದು ಪುರಸಭೆ ಮಾಜಿ ಸದಸ್ಯ ಎಂ. ಜಾಫರ್ ಸಾಹೇಬ್ ಹೇಳಿದರು.

ಪಟ್ಟಣದ ವರಕೈ ಅಂಜನೇಯ ಸ್ವಾಮಿ ದೇವಸ್ಥಾನದ ಸಮಿತಿಯವರು ಆಯೋಜಿಸಿದ್ದ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಾಚೀನ ಕಾಲದಿಂದಲೂ ಅನೇಕ ಜನಾಂಗಗಳು ನೆಲೆಸಿರುವ ಭಾರತವು ನಾನಾ ಬಗೆಯ ಜಾತಿ, ಮತ, ಧರ್ಮಗಳನ್ನು ಹೊಂದಿದೆ. ಆದರೆ ವೇಷ, ಭಾಷೆ, ಬಣ್ಣ ಬೇರೇಯಾದರೂ ಎಲ್ಲರೂ ಭಾರತೀಯರೇ, ಪ್ರತಿಯೊಬ್ಬರು ಉಪಯೋಗಿಸುವ ನೈಸರ್ಗಿಕ ಸಂಪನ್ಮೂಗಳು ಒಂದೇ ಆಗಿರುವಾಗ ನಾವೆಲ್ಲರೂ ಒಂದು ಎಂಬ ಮನೋಭಾವ ಬಂದಾಗ ಮಾತ್ರ ರಾಷ್ಟ್ರೀಯ ಭಾವೈಕ್ಯತೆ ಸಾಧ್ಯ ಎಂದರು.

ದೇವಸ್ಥಾನದ ಸಮಿತಿಯವರ ಬಹುದಿನಗಳ ಕೋರಿಕೆಯಂತೆ ಇಲ್ಲಿನ ಒಂದು ಎಕರೆ ಜಮೀನಿನಲ್ಲಿ 40/60 ಜಮೀನನ್ನು ದೇವಸ್ಥಾನದ ಉಪಯೋಗಕ್ಕೆ ನೀಡಿದ್ದೇನೆ ಎಂದು ಹೇಳಿದರು.

ಕೆ. ತಿರುಮಲ ಮಾತನಾಡಿ, ಜಾತಿ ಧರ್ಮದ ಹೆಸರಿನ ಗುದ್ದಾಟದಲ್ಲಿ ನಾವೆಲ್ಲಾ ಒಂದೇ ಎಂಬ ಭಾವನೆಯಿಂದ ಎಂ. ಜಾಫರ್ ಸಾಹೇಬ್ ಅವರು ದೇವಸ್ಥಾನಕ್ಕೆ ಜಮೀನು ದಾನವಾಗಿ ನೀಡಿರುವುದು ಸಂತೋಷದ ವಿಷಯ ಎಂದರು.

ಈ ಸಂದರ್ಭದಲ್ಲಿ ವರಕೈ ಅಂಜನೇಯ ಸ್ವಾಮಿ ಸಮಿತಿ ಅಧ್ಯಕ್ಷ ಹಳೇಬ್ಯಾಡರ ಪರಸಪ್ಪ, ಆಲೂರು ಶ್ರೀನಿವಾಸ, ಡಿ. ಊರಪ್ಪ, ಚನ್ನಪ್ಪ, ಕೆ. ಸೋಮಶೇಖರ, ಯಲ್ಲಜ್ಜಿ ಗೋಣೆಪ್ಪ, ಗಿಡ್ಡಳ್ಳಿ ಅಂಜಿನಪ್ಪ, ವೀರಭದ್ರಪ್ಪ, ಚಂದ್ರಪ್ಪ, ಕೂಲಹಳ್ಳಿ ಮಂಜುನಾಥ, ಆಟೋ ಜಗನ್ನಾಥ, ಧರ್ಮಪ್ಪ ಇತರರು ಉಪಸ್ಥಿತರಿದ್ದರು.

# ಡಿಡಿಸಿಸಿ ಬ್ಯಾಂಕ್ ನೇಮಕಾತಿಯಲ್ಲಿ ಅಕ್ರಮ ಮುಖ್ಯಮಂತ್ರಿಯವರ ಜನಸ್ಪಂದನದಲ್ಲಿ ದೂರು

ದಾವಣಗೆರೆ, ಫೆ. 13- ಡಿಡಿಸಿಸಿ ಬ್ಯಾಂಕ್‌ನಲ್ಲಿ ನಡೆದ ನೇಮಕಾತಿ ಪ್ರಕ್ರಿಯೆಯಲ್ಲಿ ಅಕ್ರಮ ನಡೆದಿರುವುದಾಗಿ ಬೆಂಗಳೂರಿನಲ್ಲಿ ಮೊನ್ನೆ ನಡೆದ ಮುಖ್ಯಮಂತ್ರಿಗಳ ವಿಶೇಷ ಜನ ಸ್ಪಂದನ ಕಾರ್ಯಕ್ರಮದಲ್ಲಿ ಶ್ರೀಕಾಂತ ಮುದ್ದಿ ಅವರು ದೂರು ಸಲ್ಲಿಸಿದ್ದಾರೆ. ದಾವಣಗೆರೆ ಡಿಸಿಸಿ ಬ್ಯಾಂಕ್‌ನಿಂದ 2022-23ನೇ ಸಾಲಿನಲ್ಲಿ 48 ಹುದ್ದೆಗಳಿಗೆ ಅರ್ಜಿಗಳನ್ನು ಕರೆಯಲಾಗಿತ್ತು. ನಂತರ ನಡೆದ ನೇಮಕಾತಿಯಲ್ಲಿ ಅಕ್ರಮ ನಡೆದಿದೆ. ಮಾಹಿತಿ ಹಕ್ಕು 2005ರ ಅಡಿಯಲ್ಲಿ ನೇಮಕಾತಿ ಬಗ್ಗೆ ಮಾಹಿತಿ ಕೇಳಿದರೆ ಅಧಿಕಾರಿಗಳು ಮಾಹಿತಿ ನೀಡುತ್ತಿಲ್ಲ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

## ಎಂಟನೇ ವರ್ಷದ ಪುಣ್ಯಸ್ಮರಣೆ



**ಟಿ.ಎಸ್. ಶಿವಾನಂದಯ್ಯ**
**(ಮಸಾಲೆ ಮಂಡಕ್ಕಿ ಮಂಜಣ್ಣ)**

ನೀವು ನಮ್ಮನ್ನಗಲಿ ಇಂದಿಗೆ ಎಂಟು ವರ್ಷ.
ಸದಾ ನಿಮ್ಮ ನೆನಪು ಹಾಗೂ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ ಮತ್ತು ಸದಾ ನಿಮ್ಮ ಸ್ಮರಣೆಯಲ್ಲಿರುವ ;

**ಪತ್ನಿ : ಶ್ರೀಮತಿ ಶಾರದಮ್ಮ**
**ಪುತ್ರಿಯರು-ಅಳಿಯಂದಿರು : ಶ್ರೀಮತಿ ಮಂಜುಳ ಶ್ರೀ ಹೆಚ್.ಕೆ. ಚನ್ನಬಸಪ್ಪ (ಚಂದ್ರು)**
**ಶ್ರೀಮತಿ ವೀರಮ್ಮ ಶ್ರೀ ಚಂದ್ರಮೌಳಿ**
**ಮಗ-ಸೊಸೆ: ಶ್ರೀ ಶಿವಶಂಕರ್ ಶ್ರೀಮತಿ ಗೌರಮ್ಮ**
**ಮತ್ತು ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು. ಮೊ: 95132 09905**

## ಸವಿತಾ ಸಮಾಜದ ಕೊಲ್ಪುರ ಸರೋಜಮ್ಮ ನಿಧನ



ದಾವಣಗೆರೆ ಎಸ್.ಎಂ.ಕೃಷ್ಣ ನಗರ, ಆಂಜನೇಯ ದೇವಸ್ಥಾನದ ಹತ್ತಿರ ವಾಸಿ ದಿ. ಕೊಲ್ಪರ ನರಸಿಂಹಪ್ಪ ಇವರ ಧರ್ಮಪತ್ನಿ ಶ್ರೀಮತಿ ಸರೋಜಮ್ಮ (70) ಇವರು ದಿನಾಂಕ 12.02.2024ರ ಸೋಮವಾರ ರಾತ್ರಿ 7ಕ್ಕೆ ನಿಧನರಾದರು. ನಾಲ್ವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 13.02.2024ರ ಮಂಗಳರ ಮಧ್ಯಾಹ್ನ 2ಕ್ಕೆ ನಗರದ ಬೂದಾಳ್ ರಸ್ತೆಯಲ್ಲಿರುವ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಲಿದೆ.

## ಕರ್ನಾಟಕದ 70 ರೈತರು ಪೊಲೀಸರ ವಶಕ್ಕೆ

**(1ನೇ ಪುಟದಿಂದ)** ವಹಿಸಲಾಗಿದೆ. ಈ ಕ್ರಮವನ್ನು ವಿರೋಧಿಸಿ ರೈತರು ಪ್ರತಿಭಟನೆ ನಡೆಸಿದ್ದಾರೆ ಎಂದು ಧಾರವಾಡದ ರೈತ ನಾಯಕ ಪರಶುರಾಮ್ ತಿಳಿಸಿದ್ದಾರೆ. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನೀಡಬೇಕು ಎಂಬುದೂ ಸೇರಿದಂತೆ ಹಲವಾರು ಬೇಡಿಕೆಗಳನ್ನು ಮುಂದಿಟ್ಟುಕೊಂಡು ರೈತರು ದೆಹಲಿಯಲ್ಲಿ ಮಂಗಳವಾರದಿಂದ ಪ್ರತಿಭಟನೆ ನಡೆಸಲು ಉದ್ದೇಶಿಸಿದ್ದಾರೆ.

## ಫಲಾನುಭವಿಗಳ ಸೆಲ್ಫಿ

**(1ನೇ ಪುಟದಿಂದ)** ಬಗ್ಗೆ ಎಲ್ಲರಿಗೂ ತಿಳಿಸಬೇಕು ಎಂದು ಕರೆ ನೀಡಿದರು. ಮಹಿಳೆಯರಿಗಾಗಿ ಕೇಂದ್ರ ಸರ್ಕಾರವು ಹಲವು ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಸ್ತ್ರೀ ಸಮುದಾಯಕ್ಕೆ ಶಕ್ತಿ ತುಂಬಿದೆ ಎಂದು ತಿಳಿಸಿದರು.

ಕಾರ್ಯಕ್ರಮದ ಸಂಚಾಲಕಿ ಜಯಮ್ಮ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಭಾಗ್ಯ ಪಿಸಾಳೆ, ಪುಷ್ಪಾ ವಾಲಿ ಸೇರಿದಂತೆ ಹಲವು ಕಾರ್ಯಕರ್ತೆಯರು ಭಾಗವಹಿಸಿದ್ದರು. ಪ್ರವಾಸದ ಭಾಗವಾಗಿ ಹೇಮಾಮಾಲಿನಿ ಅವರು ಆನೆಕೊಂಡ ದೇವಸ್ಥಾನಕ್ಕೆ ಭೇಟಿ ನೀಡಿದರು. ಅಂಗನವಾಡಿ, ಆಶಾ ಕಾರ್ಯಕರ್ತೆಯರ ಭೇಟಿ, ಶೈಕ್ಷಣಿಕ ಸಂಸ್ಥೆಗಳ ಯುವ ಮತದಾರರೊಂದಿಗೆ ಸಂವಾದ, ಬೂತ್ ಮಟ್ಟದ ಕಾರ್ಯಕರ್ತರ ಸಭೆ ನಡೆಸಿದರು.

# ಸದೃಢ ಆರೋಗ್ಯಕ್ಕೆ ಕ್ರೀಡೆ ಸಹಕಾರಿ : ದಿನೇಶ್ ಶೆಟ್ಟಿ



ದಾವಣಗೆರೆ, ಫೆ. 12 - ಮಕ್ಕಳು ತಮ್ಮ ಓದಿನ ಜೊತೆಗೆ ಹೆಚ್ಚುಹೆಚ್ಚಾಗಿ ಕ್ರೀಡಾ ಚಟುವಟಿಕೆಗಳಲ್ಲಿಯೂ ಭಾಗವಹಿಸುವುದರಿಂದ ಆರೋಗ್ಯವಂತರಾಗಿರಬಹುದು ಎಂದು ಕ್ರೀಡಾ ಪಟುಗಳ ಸಂಘದ ಅಧ್ಯಕ್ಷ , ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ನಗರದ ಪಿ.ಜೆ. ಬಡಾವಣೆಯಲ್ಲಿರುವ ಸಂತ ಪೌಲರ ಶಾಲೆಯಲ್ಲಿ ಶನಿವಾರ ನಡೆದ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳು ಓದಿನ ಜೊತೆಗೆ ಕ್ರೀಡೆಗಳಲ್ಲಿ ಭಾಗವಹಿಸಿ ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದಲ್ಲಿ ವಿಜೇತರಾಗಿ ಸಾಧನೆ ಮಾಡಿ ನಿಮ್ಮ ಶಾಲೆಗೆ, ಪೋಷಕರಿಗೆ ಕೀರ್ತಿ ತನ್ನಿರಿ ಎಂದು ಶುಭ ಹಾರೈಸಿದರು.

ಸಂತ ಪೌಲರ ವಿದ್ಯಾಸಂಸ್ಥೆಯ ಮುಖ್ಯಸ್ಥ ಸಿಸ್ಟರ್ ಮಾರ್ಜರಿ, ಸೆಂಟ್ರಲ್ ಸ್ಕೂಲ್‌ನ ಪ್ರಾಂಶುಪಾಲ ಸಿಸ್ಟರ್ ಸಮಂತ, ಕನ್ನಡ ಮಾಧ್ಯಮ ವಿಭಾಗದ ಸಿಸ್ಟರ್ ಸುಪ್ರಿಯಾ, ಹೈಸ್ಕೂಲ್ ಮುಖ್ಯೋಪಾಧ್ಯಾಯ ಸಿಸ್ಟರ್ ವೆನಿಸಾ, ಆಂಗ್ಲ ಮಾಧ್ಯಮ ವಿಭಾಗದ ಮುಖ್ಯೋಪಾಧ್ಯಾಯ ವೈಲೆಟ್, ದೈಹಿಕ ಶಿಕ್ಷಕರಾದ ರೀಟಾ , ಟಿ.ಎಂ. ರವೀಂದ್ರ ಸ್ವಾಮಿ, ಗೋವಿಂದಪ್ಪ, ಪ್ರವೀಣ್, ಶಿಕ್ಷಕರಾದ ಕಿರಣ್, ಎಂ.ಕೆ. ಮಂಜುಳ, ರಾಧಾ, ಅಮಲ, ಭಾಗ್ಯನಾಥನ್, ಎಲೀಜ, ಸೂಸಿ ಮೇರಿ, ಫಿಲೋಮಿನ, ನಯನ, ರಾಗಿಣಿ ಸೇರಿದಂತೆ ವಿವಿಧ ವಿಭಾಗಗಳ ಶಿಕ್ಷಕರು ಭಾಗವಹಿಸಿದ್ದರು.

## ದಿ. ಶಾಮನೂರು ಸಂಗಪ್ಪ ಮೇಷ್ಟ್ರು ಅಳಿಯ ಕೆ.ತಿಪ್ಪಣ್ಣ ನಿಧನ



ದಾವಣಗೆರೆ ಸಿಟಿ ಎಸ್.ಎಸ್. ಲೇಔಟ್ ಬಿ ಬ್ಲಾಕ್ ನೇತಾಜಿ ಇಂಡೋರ್ ಸ್ಟೇಡಿಯಂ ಹಿಂಭಾಗ, ಪದ್ಮ ಅಪಾರ್ಟ್‌ಮೆಂಟ್ ನಿವಾಸಿ

**ಶ್ರೀ ಕೆ. ತಿಪ್ಪಣ್ಣ**
**(ನಿವೃತ್ತ ಗ್ರಂಥಪಾಲಕರು, MSB ಕಾಲೇಜು)**

ಇವರು ದಿನಾಂಕ 12.02.2024ರ ಸೋಮವಾರ ಮಧ್ಯಾಹ್ನ 3.30ಕ್ಕೆ ನಿಧನರಾದರು. ಮೃತರಿಗೆ 76 ವರ್ಷ ವಯಸ್ಸಾಗಿತ್ತು. ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 14.02.2024ರ ಬುಧವಾರ ಬೆಳಿಗ್ಗೆ 10.30ಕ್ಕೆ ನಗರದ ಗ್ಲಾಸ್ ಹೌಸ್ ಹಿಂಭಾಗದ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ವಿ.ಸೂ. : ಮೃತರ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ಮೃತರ ಸ್ವಗೃಹದಲ್ಲಿ ದಿನಾಂಕ 14.02.2024ರ ಬೆಳಿಗ್ಗೆ 7 ಗಂಟೆಯಿಂದ 10.30ರವರೆಗೆ ಇರಿಸಲಾಗುವುದು.**

**ದುಃಖತಪ್ತರು : ಪತ್ನಿ ಶ್ರೀಮತಿ ನಿರ್ಮಲ, ಮಕ್ಕಳಾದ ರವೀಂದ್ರನಾಥ .ಕೆ, ಡಾ. ರೂಪ ಕೆ.ಟಿ. ಶ್ರೀಮತಿ ರೇಖಾ ಕೆ. ಮತ್ತು ರಶ್ಮಿ ಕೆ.ಟಿ. ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು ಮಿತ್ರರು.**
**ಮೊ : 94495 12232, 98455 68791**

## ಭಾವಪೂರ್ಣ ಶ್ರದ್ಧಾಂಜಲಿ



ಸನ್ಮತಿ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಮಂಡಿಪೇಟೆ, ದಾವಣಗೆರೆ ಇದರ ನಿರ್ದೇಶಕರಾದ ಶ್ರೀ ರುದ್ರೇಶ್ ಡಿ. ಇವರ ಧರ್ಮಪತ್ನಿ


**ಶ್ರೀಮತಿ ಭಾಗ್ಯ ಆರ್.** (63) ಇವರು

ದಿನಾಂಕ : 12.02.2024ರ ಬೆಳಿಗ್ಗೆ 11 ಗಂಟೆಗೆ ನಿಧನರಾಗಿದ್ದು, ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ನಿರ್ದೇಶಕ ಮಂಡಳಿ ಮತ್ತು ಸಿಬ್ಬಂದಿ ವರ್ಗ**
**ಸನ್ಮತಿ ಸೌಹಾರ್ದ ಸಹಕಾರಿ ಸಂಘ ನಿಯಮಿತ**
**#712, ಮೊದಲನೇ ಮಹಡಿ, ಮಂಡಿಪೇಟೆ, ದಾವಣಗೆರೆ.**

॥ ಶ್ರೀ ಬಸವೇಶ್ವರ ಪ್ರಸನ್ನ ॥

## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿಲ್ಲೆ, ತಾ. ಹೊಸ ಬೆಳವನೂರು ಗ್ರಾಮದ ವಾಸಿಗಳಾದ
**ಕರೇ ಭರ್ಮಪ್ಪರ**
**ಕೆ. ಉಜ್ಜಪ್ಪನವರ ಅಣ್ಣನವರಾದ**
**ದಿ॥ ಕೆ. ಮಹಾದೇವಪ್ಪನವರ**
**ಮಗನಾದ ಶ್ರೀ ಕೆ. ಮಂಜುನಾಥಪ್ಪ**
**ಮತ್ತು ಸಹೋದರರು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 02.02.2024ನೇ ಶುಕ್ರವಾರ ಬೆಳಗಿನ ಜಾವ 2.00 ಗಂಟೆಗೆ ನಮ್ಮ ಅಣ್ಣನವರಾದ

**ಶರಣ ಕೆ. ವಾಮದೇವಪ್ಪನವರು** (ನಿವೃತ್ತ ಬಡ್ತಿ ಮುಖ್ಯ ಶಿಕ್ಷಕರು)
ಇವರು, ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು** ದಿನಾಂಕ : 14.02.2024ನೇ ಬುಧವಾರ ಬೆಳಿಗ್ಗೆ 10.30 ಗಂಟೆಗೆ ದಾವಣಗೆರೆ ತಾಲ್ಲೂಕು ಹೊಸ ಬೆಳವನೂರು ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ರತ್ನಮ್ಮ ಮತ್ತು ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಕರೇ ಭರ್ಮಪ್ಪರ ವಂಶಸ್ಥರು, ಬೆಳವನೂರು ಗ್ರಾಮಸ್ಥರು ಹಾಗೂ ಬಂಧು-ಮಿತ್ರರು.**
**ಮೊ : 63607 53223, 97396 33922**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ

॥ ಶ್ರೀ ನಾಯಕನಹಟ್ಟಿ ತಿಪ್ಪೇರುದ್ರಸ್ವಾಮಿ ಪ್ರಸನ್ನ ॥

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ನಗರ ವಾಸಿ
**ಶ್ರೀಮತಿ ಪ್ರೇಮಾ ನಾಗರಾಜ್**
**ಮತ್ತು ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 05.02.2024ನೇ ಸೋಮವಾರ ರಾತ್ರಿ 10 ಗಂಟೆಗೆ ನನ್ನ ಪೂಜ್ಯ ಪತಿಯವರಾದ

**ಶ್ರೀ ನಾಗರಾಜ ಎ.ಬಿ.**
ಸಿವಿಲ್ ಇಂಜಿನಿಯರ್
ಇವರು, ಲಿಂಗೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ಕೈಲಾಸ ಸಮಾರಾಧನೆ'ಯನ್ನು**
ದಿನಾಂಕ : 13.02.2024ನೇ ಮಂಗಳವಾರ ಬೆಳಿಗ್ಗೆ 11.45 ಕ್ಕೆ ನೇತ್ರಾವತಿ ಕನ್ವೆನ್ಷನ್ ಹಾಲ್, ನಿಯರ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನಿಟ್ಟುವಳ್ಳಿ ರೋಡ್, ಸೋಮೇಶ್ವರ ಸ್ಕೂಲ್ ಹತ್ತಿರ, ದಾವಣಗೆರೆ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ಇಂತಿ ದಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಪ್ರೇಮಾ ನಾಗರಾಜ್, ಮೃತರ ಸಹೋದರರು, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಬಂಧು ಮಿತ್ರರು. ಮೊ : 94488 48539**

ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಉಪ್ಪು ಹುಳಿ ಇಲ್ಲದ ರಾಜ್ಯಪಾಲರ ಭಾಷಣ



**ಜಾಹೀರಾತುಗಳಿಂದ ನಡೆಯುತ್ತಿರುವ ಸರ್ಕಾರ: ಕುಮಾರ ಸ್ವಾಮಿ ಟೀಕೆ**

ಬೆಂಗಳೂರು, ಫೆ. 12 - ರಾಜ್ಯಪಾಲರ ಭಾಷಣದಲ್ಲಿ ಉಪ್ಪು, ಹುಳಿ, ಖಾರ ಏನೂ ಇಲ್ಲ. ಇದೊಂದು ಜಾಹೀರಾತುಗಳಿಂದ ನಡೆಯುತ್ತಿರುವ ಸರ್ಕಾರ ಎಂದು ಮಾಜಿ ಸಿಎಂ ಹೆಚ್. ಡಿ.ಕುಮಾರಸ್ವಾಮಿ ಕಟುವಾಗಿ ಟೀಕಿಸಿದ್ದಾರೆ.

ಒಂದು ಕಡೆ ಬರಗಾಲ, ಕೇಂದ್ರ ಸರ್ಕಾರದಿಂದ ಹಣ ಬರುತ್ತಿಲ್ಲ ಎನ್ನುವ ಸರ್ಕಾರ, ಗಂಜಿ ಕೇಂದ್ರಗಳನ್ನು ಸೃಷ್ಟಿ ಮಾಡಿ 90 ಮಂದಿಗೆ ಸಂಪುಟ ದರ್ಜೆ ನೀಡಿದೆ.

ಅದರಲ್ಲಿ 77 ಶಾಸಕ ರಿಗೆ ಸಂಪುಟ ದರ್ಜೆ ಭಾಗ್ಯ ನೀಡಿದ್ದರೆ, ಮುಖ್ಯ ಮಂತ್ರಿ ಕಚೇರಿಯಲ್ಲಿ 9 ಜನರಿಗೆ ಸಂಪುಟ ಭಾಗ್ಯ ಕರುಣಿಸಲಾಗಿದೆ ಎಂದು ಹೇಳಿದರು.

ರಾಜ್ಯದ ಆಡಳಿತದ ಇತಿಹಾಸದಲ್ಲಿ ಇಷ್ಟು ಬೇಕಾಬಿಟ್ಟಿಯಾಗಿ ಅಧಿಕಾರ ಹಂಚಿಕೆ ಮಾಡಿ ಖಜಾನೆಗೆ ನಷ್ಟ ಉಂಟು ಮಾಡಿದ ಉದಾಹರಣೆ ಇಲ್ಲ, ಕ್ಯಾಬಿನೆಟ್ ದರ್ಜೆ ನೀಡುವುದಕ್ಕೂ ಒಂದು ಲೆಕ್ಕ ಬೇಡವೇ? ಉಪಮುಖ್ಯಮಂತ್ರಿ ಅವರ ಆರೋಗ್ಯ ತಪಾಸಣೆ ಮಾಡುವ ವೈದ್ಯರಿಗೂ ಕ್ಯಾಬಿನೆಟ್ ದರ್ಜೆ, ಕಲೆಕ್ಷನ್ ಮಾಡಿಕೊಡುವ ಅಸಾಮಿಗೂ ಕ್ಯಾಬಿನೆಟ್ ದರ್ಜೆ, ಕರ್ನಾಟಕ ಹಣಕಾಸು ಸಂಸ್ಥೆ ಅಧ್ಯಕ್ಷರನ್ನಾಗಿ ಶಾಸಕರನ್ನು ನೇಮಕ ಮಾಡುತ್ತಿರುವುದು ಸರಿಯೇ ? ಎಂದು ಪ್ರಶ್ನಿಸಿದರು.

ಬರಕ್ಕೆ ತುತ್ತಾದ ರೈತರಿಗೆ ಪರಿಹಾರ ಕೊಡಲು ಇವರಲ್ಲಿ ಹಣವಿಲ್ಲ, ಸಂಪುಟ ದರ್ಜೆ ಭಾಗ್ಯಕ್ಕೆ ಕೋಟ್ಯಂತರ ರೂಪಾಯಿ ಖರ್ಚು ಮಾಡಲು ಹಣ ಇದೆ ಎಂದು ಟೀಕಿಸಿದರು.

ಗ್ಯಾರಂಟಿಗಳ ಬಗ್ಗೆ ಪ್ರತಿದಿನವೂ ಮಾಧ್ಯಮಗಳಲ್ಲಿ ನುಡಿದಂತೆ ನಡೆದಿದ್ದೇವೆ ಎಂದು ಹೇಳುತ್ತಿದ್ದಾರೆ, ಜನರಿಗೆ ಸರಿಯಾಗಿ ತಲುಪದ ಗ್ಯಾರಂಟಿಗಳ ಬಗ್ಗೆ ರಾಜ್ಯಪಾಲರಿಂದ ಸುಳ್ಳು ಭಾಷಣ ಮಾಡಿಸಿದ್ದಾರೆ ಎಂದೂ ಕುಮಾರಸ್ವಾಮಿ ಹೇಳಿದರು.

ಹದಿನೈದು ಬಜೆಟ್ ಮಂಡನೆ ಮಾಡಿದ ಸಿದ್ದರಾಮಯ್ಯ, ರಾಜ್ಯಪಾಲರ ಭಾಷಣದಲ್ಲಿ ಕಾಂತರಾಜ್ ವರದಿಯ ಸದ್ದೇ ಇಲ್ಲ. ವರದಿ ಸ್ವೀಕಾರ ಮಾಡಿ ಜಾರಿ ಮಾಡುತ್ತೇನೆ ಎಂದು ಚಿತ್ರದುರ್ಗದಲ್ಲಿ ಅಬ್ಬರ ಮಾಡಿದ್ದರಲ್ಲ, ಜಯಪ್ರಕಾಶ್ ಹೆಗ್ಡೆ ಅವರಿಂದ ವರದಿಯಲ್ಲಿ ಏನು ಬರೆಸುತ್ತಿದ್ದೀರಾ? ಎಂದು ಪ್ರಶ್ನಿಸಿದ್ದಾರೆ.

# ಬಿಜೆಪಿ ಯೋಜನೆಗಳ ಬಿಂಬಿಸಿಕೊಂಡ ಸರ್ಕಾರ



**ವಿಪಕ್ಷ ನಾಯಕ ಆರ್. ಅಶೋಕ್ ತರಾಟೆ**

ಬೆಂಗಳೂರು, ಫೆ. 12 - ಕಾಂಗ್ರೆಸ್ ಸರ್ಕಾರ ರಾಜ್ಯಪಾಲರ ಬಾಯಲ್ಲಿ ಸುಳ್ಳು ಹೇಳಿಸಿದ್ದಲ್ಲದೆ, ಬಿಜೆಪಿ ಸರ್ಕಾರದ ಯೋಜನೆಗಳನ್ನು ತಮ್ಮದೇ ಯೋಜನೆಯಾಗಿ ಬಿಂಬಿಸಿಕೊಂಡಿದೆ ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಇಂದಿಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಪಾಲರು ಇಂದು ವಿಧಾನಮಂಡಲದ ಜಂಟಿ ಸದನಗಳನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ಕಾಂಗ್ರೆಸ್ ಸರ್ಕಾರ ಐದು ಗ್ಯಾರಂಟಿಗಳನ್ನು ಜಾರಿಗೆ ತಂದಿದ್ದೇವೆ ಎಂದಿದೆಯಾದರೂ ಯುವನಿಧಿ ಯೋಜನೆ ಇನ್ನೂ ನಿರುದ್ಯೋಗಿಗಳ ಕೈ ಸೇರಿಲ್ಲ ಎಂದರು.

ಬರ ಪರಿಹಾರ ಕೊಟ್ಟಿದ್ದೇವೆ ಎನ್ನುತ್ತಾರೆ, ಪರಿಹಾರ ವನ್ನು ಕಂತಾಗಿ ನೀಡಬಾರದು. ಹಿಂದಿನ ಬಿಜೆಪಿ ಸರ್ಕಾರ ಪರಿಹಾರವನ್ನು ಒಂದೇ ಸಲಕ್ಕೆ ರೈತರ ಖಾತೆಗೆ ಹಾಕಿತ್ತು, ಈ ಸರ್ಕಾರ ಕಂತು ಕಂತಾಗಿ ನೀಡುವುದು ತಪ್ಪು. 25 ಸಾವಿರ ರೂ. ಪರಿಹಾರ ಕೇಳಲಾಗಿದೆ, ಆ ವಿಷಯವನ್ನು ಪ್ರಸ್ತಾಪಿಸಿಲ್ಲ. ಕೇವಲ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸಲಾಗಿದೆ ಎಂದು ಹೇಳಿದರು.

ಶಿವಮೊಗ್ಗ ವಿಮಾನ ನಿಲ್ದಾಣ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಆಗಿತ್ತು. ಮೆಟ್ರೊ ರೈಲು ಯೋಜನೆ ಕೇಂದ್ರ ಸರ್ಕಾರದಿಂದ ಆಗಿದೆ. ಜಲ ಜೀವನ್ ಮಿಷನ್ ಕೂಡ ಕೇಂದ್ರದ ಕೊಡುಗೆ. ಆದರೂ ಅವೆಲ್ಲ ತಮ್ಮವೇ ಎಂದು ಹೇಳಿಕೊಂಡಿದ್ದಾರೆ ಎಂದು ಟೀಕಿಸಿದರು.

ಕನ್ನಡದ ಉಳಿವು ಹೆಸರಿನಲ್ಲಿ ಹೋರಾಟಗಾರರನ್ನು ಜೈಲಿಗೆ ಹಾಕಿದ್ದಾರೆ. ಎಸ್‌ಸಿ-ಎಸ್ಪಿ, ಟಿಎಸ್ಪಿ ಹಣವನ್ನು ದಲಿತರಿಗೆ ಬಳಸದೆ ಬೇರೆ ಯೋಜನೆಗಳಿಗೆ ಬಳಸಿದ್ದಾರೆ. ಕಾಂಗ್ರೆಸ್ ಸರ್ಕಾರದಿಂದ ಒಂದೇ ಒಂದು ಕಾಮಗಾರಿ ನಡೆದಿಲ್ಲ ಎಂಬುದಾಗಿ ಶಾಸಕರೇ ಹೇಳಿದ್ದಾರೆ. 40 ಪರ್ಸೆಂಟ್ ಕಮೀಷನ್ ಸರ್ಕಾರ ಎಂದು ಗುತ್ತಿಗೆದಾರರು ಆರೋಪಿಸಿದ್ದಾರೆ ಎಂದರು.

ಬರಗಾಲವಿದ್ದರೂ ಕಳೆದ ವರ್ಷಕ್ಕಿಂತ ಆತ್ಮಹತ್ಯೆ ಕಡಿಮೆಯಾಗಿದೆ ಎಂದು ಹೋಲಿಸಿಕೊಂಡಿದ್ದಾರೆ. ಇವರ ಸರ್ಕಾರದ ಸಚಿವ ಶಿವಾನಂದ ಪಾಟೀಲ್, ಪರಿಹಾರ ಪಡೆಯಲೆಂದೇ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ ಎಂದು ಕೀಳಾಗಿ ಮಾತನಾಡಿದ್ದರು. ಆತ್ಮಹತ್ಯೆ ಹೆಚ್ಚಿದ್ದರೂ ಅದನ್ನು ಮುಚ್ಚಿಟ್ಟು ರಾಜ್ಯಪಾಲರ ಭಾಷಣದಲ್ಲಿ ಸುಳ್ಳು ಹೇಳಿಸಿದ್ದಾರೆ ಎಂದು ಆರೋಪಿಸಿದರು.

ಸರ್ಕಾರ ಹಿಂದೂ-ಮುಸ್ಲಿಮ್ ನಡುವೆ ದ್ವೇಷ ಬಿತ್ತುವ ಕೆಲಸ ಮಾಡಿದೆ, ಮುಸ್ಲಿಮರಿಗೆ ಒಂದು ಸಾವಿರ ಕೋಟಿ ರೂ. ನೀಡುವ ಸರ್ಕಾರ, ಪರಿಹಾರ ಕೇಳಿದರೆ ಕೇಂದ್ರ ಸರ್ಕಾರದ ಮೇಲೆ ಆರೋಪ ಮಾಡುತ್ತದೆ ಎಂದರು. ಗ್ಯಾರಂಟಿಗಾಗಿ ಖಜಾನೆ ಖಾಲಿ ಮಾಡಿದ ಸರ್ಕಾರ, ಶಾಸಕರಿಗೆ ಅನುದಾನ ನೀಡದೆ ಸತಾಯಿಸು ತ್ತಿದೆ. ಯಾವ ಯೋಜನೆಗೂ ಹಣ ನೀಡದೆ ಗ್ಯಾರಂಟಿಗೆ ಮಾತ್ರ ಹಣ ಕೊಟ್ಟಿರುವುದೇ ಆರ್ಥಿಕ ಅಸಮಾನತೆ.

ದಲಿತರ ಹಣವನ್ನು ಗ್ಯಾರಂಟಿಗಾಗಿ ಬಳಕೆ ಮಾಡಿರುವುದೇ ಆರ್ಥಿಕ ಅಸಮಾನತೆ. ಪ್ರಧಾನಿ ನರೇಂದ್ರ ಮೋದಿ ಸರ್ಕಾರದಿಂದ ಕಳೆದ ಐದು ವರ್ಷಗಳಲ್ಲಿ 13.5 ಕೋಟಿ ಜನರು ಬಡತನದಿಂದ ಹೊರಬಂದಿದ್ದಾರೆ. ಇಂತಹ ಒಂದೂ ಕೆಲಸವನ್ನು ಕಾಂಗ್ರೆಸ್ ಮಾಡಿಲ್ಲ ಎಂದರು.

# ಸರ್ಕಾರಿ ಕಚೇರಿಗಳಲ್ಲಿ 'ಸಾಂಸ್ಕೃತಿಕ ನಾಯಕ' ಉಲ್ಲೇಖಕ್ಕೆ ಆದೇಶ

ಬೆಂಗಳೂರು, ಫೆ. 12 - 12ನೇ ಶತಮಾನದಲ್ಲಿ ಸಾಮಾಜಿಕ ಕ್ರಾಂತಿ ಮೂಲಕ ಸಮ ಸಮಾಜ ನಿರ್ಮಾಣಕ್ಕೆ ಶ್ರಮಿಸಿದ ಕ್ರಾಂತಿ ಕಾರಿ ಬಸವಣ್ಣನವರನ್ನು ಕರ್ನಾಟಕದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದ್ದು, ಸರ್ಕಾರಿ ಕಚೇರಿಗಳಲ್ಲಿರುವ, ಸರ್ಕಾರ ಅನುಮೋದಿ ಸಿರುವ ಬಸವಣ್ಣನವರ ಭಾವಚಿತ್ರಗಳಲ್ಲಿ 'ವಿಶ್ವ ಗುರು ಬಸವಣ್ಣ ಸಾಂಸ್ಕೃತಿಕ ನಾಯಕ' ಎಂದು ಅಳವಡಿಸಲು ಕ್ರಮಕೈಗೊಳ್ಳುವಂತೆ ಸಿಎಂ ಸಿದ್ದರಾಮಯ್ಯ ಅವರು ಮುಖ್ಯಕಾರ್ಯದರ್ಶಿ ಅವರಿಗೆ ಆದೇಶಿಸಿದ್ದಾರೆ. ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ನಡೆಯುವ ಎಲ್ಲಾ ಕಾರ್ಯಕ್ರಮ ಗಳಲ್ಲಿ ಬಸವಣ್ಣನವರ ಚಿಂತನೆಗಳು ಹಾಗೂ ಸರ್ಕಾರದ ಉದ್ದೇಶಗಳ ಕುರಿತು ಅರಿವು ಮೂಡಿಸುವಲ್ಲಿ ಸೂಕ್ತ ನಿರ್ದೇಶನಗಳನ್ನು ಹೊರಡಿಸಬೇಕೆಂದು ಮುಖ್ಯಮಂತ್ರಿ ಅವರು ಬರೆದಿರುವ ಪತ್ರದಲ್ಲಿ ಸೂಚಿಸಿದ್ದಾರೆ.

# ಮನೆ ಬಾಗಿಲಿಗೆ ಇ-ಆಸ್ತಿ ಪತ್ರ ಅಭಿಯಾನ

## ವಿನೋಬನಗರದಲ್ಲಿ ಪಾಲಿಕೆಯಿಂದ ಇಂದು ಇ-ಆಸ್ತಿ ಪತ್ರ ನೀಡುವ ಕಾರ್ಯಕ್ರಮ



ದಾವಣಗೆರೆ, ಫೆ. 12 - ಮಹಾನಗರ ಪಾಲಿಕೆ ವತಿಯಿಂದ ಇ-ಆಸ್ತಿ ಅಭಿಯಾನವನ್ನು 16ನೇ ವಾರ್ಡಿನ ವಿನೋಬ ನಗರದಲ್ಲಿ ಹಮ್ಮಿಕೊಳ್ಳಲಾಗಿತ್ತು.

ವಲಯ ಆಯುಕ್ತ ಕೆ. ನಾಗರಾಜ್ ನೇತೃತ್ವದಲ್ಲಿ ವಾರ್ಡಿನ ಮನೆ ಮನೆಗೆ ತೆರಳಿ ಮನೆ ಮಾಲೀಕರ ಸ್ಥಿರಾಸ್ಥಿಗಳ ದಾಖಲೆಗಳನ್ನು ನೀಡಿ ಇ-ಆಸ್ತಿ ತಂತ್ರಾಂಶದಲ್ಲಿ ಅಳವಡಿಸಿ ಇ-ಆಸ್ತಿ ಪತ್ರ ಪಡೆಯಬಹುದು ಎಂದು ಮಾಹಿತಿ ನೀಡಿದರು.

ಈ ಹಿನ್ನೆಲೆಯಲ್ಲಿ ನಾಳೆ ದಿನಾಂಕ 13 ರ ಮಂಗಳವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ರವರೆಗೆ ವಿನೋಬ ನಗರದ 3ನೇ ಮುಖ್ಯ ರಸ್ತೆಯಲ್ಲಿರುವ ವಾರ್ಡ್ ಆಫೀಸ್ ನಲ್ಲಿ ಮನೆ ಮಾಲೀಕರಿಗೆ ಸ್ಥಳದಲ್ಲೇ ಇ-ಆಸ್ತಿ ಪತ್ರ ನೀಡಲಾಗುವುದು ಎಂದರು.

ಈಗಾಗಲೇ ವಾರ್ಡ್‌ನ ಕಸ ವಿಲೇವಾರಿ ವಾಹನದ ಮೂಲಕ ಸಾರ್ವಜನಿಕರಿಗೆ, ಮನೆ ಮಾಲೀಕರಿಗೆ ಇ-ಆಸ್ತಿ ಮಾಡಿಸುವ ಕುರಿತು ಪ್ರಚಾರ ಮಾಡಲಾಗುತ್ತಿದೆ.

ಸ್ವತ್ತಿನ ಮಾಲೀಕರು ತಮ್ಮ ಮನೆಗೆ ಸಂಬಂಧಿಸಿದ ಸೂಕ್ತ ದಾಖಲೆಗಳು, ತಮ್ಮ ಫೋಟೋ, ಆಧಾರ್ ಕಾರ್ಡ್, ಮನೆ ಕಂದಾಯ, ನೀರಿನ ಕಂದಾಯ ಪಾವತಿ ರಸೀದಿ, ವಿದ್ಯುತ್ ಮೀಟರ್ ನಂಬರ್, ಆಸ್ತಿಗೆ ಸಂಬಂಧಿಸಿದ ಇತರೆ ದಾಖಲೆಗಳನ್ನು ತಂದು ನೀಡಿ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳಬಹುದು. ನೋಂದಣಿ ನಂತರ ಸ್ಥಳದಲ್ಲೇ ಇ-ಆಸ್ತಿ ದಾಖಲೆ ಪತ್ರ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಪಾಲಿಕೆ ಕಂದಾಯ ಅಧಿಕಾರಿ ಈರಮ್ಮ, ಕಂದಾಯ ನಿರೀಕ್ಷಕ ಹೊನ್ನಪ್ಪ, ವಿಷಯ ನಿರ್ವಾಹಕ ನಾಗರಾಜ ಸೇರಿದಂತೆ ಪಾಲಿಕೆ ಸಿಬ್ಬಂದಿ, ಇತರರು ಇದ್ದರು.

# ಬಿಹಾರದ ನೂತನ ಸರ್ಕಾರಕ್ಕೆ ವಿಶ್ವಾಸಮತದಲ್ಲಿ ಗೆಲುವು

ಪಾಟ್ನಾ, ಫೆ. 12 – ಬಿಹಾರದ ನೂತನ ಎನ್.ಡಿ.ಎ. ಸರ್ಕಾರ ಸೋಮವಾರ ವಿಶ್ವಾಸ ಮತದಲ್ಲಿ ಗೆಲುವು ಸಾಧಿಸಿದೆ. ಪ್ರತಿಪಕ್ಷಗಳ ಸದಸ್ಯರ ಸಭಾತ್ಯಾಗದ ನಡುವೆ ವಿಶ್ವಾಸ ಮತದಲ್ಲಿ ಗೆಲುವು ದೊರೆತಿದೆ. 243 ಸದಸ್ಯರ ವಿಧಾನಸಭೆಯಲ್ಲಿ 129 ಸದಸ್ಯರು ವಿಶ್ವಾಸ ನಿಲುವಳಿಯ ಪರ ಮತ ಚಲಾಯಿಸಿದರು. ಉಪಸಭಾಧ್ಯಕ್ಷ ಮಹೇಶ್ವರ್ ಹಜಾರಿ ಅವರು ನಿಲುವಳಿ ಅಂಗೀಕಾರಗೊಂಡಿದೆ ಎಂದು ತಿಳಿಸಿದರು. ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಇತ್ತೀಚೆಗೆ ಆರ್.ಜೆ.ಡಿ. ಜೊತೆಗಿನ ಮೈತ್ರಿ ಕಡಿದುಕೊಂಡು ಬಿಜೆಪಿ ಜೊತೆ ಕೈ ಜೋಡಿಸಿದ್ದರು. ಇದರಿಂದಾಗಿ ವಿಶ್ವಾಸ ಮತ ಯಾಚಿಸಲಾಗಿತ್ತು.

# ಸಿರಿಗನ್ನಡಂ ಭೋಜನಾಲಯ ಆರಂಭ



ದಾವಣಗೆರೆ, ಫೆ. 12- ನಗರದ ಜಿಲ್ಲಾ ಕ್ರೀಡಾಂಗಣದ ಪಕ್ಕದಲ್ಲಿ 'ಸಿರಿಗನ್ನಡಂ ಭೋಜನಾಲಯ' ಹಸಿದವರಿಗೆ ಉಚಿತ ಊಟ ಕಾರ್ಯಕ್ರಮವನ್ನು ಆರಂಭಿಸಲಾಯಿತು.

ಮಧ್ಯ ಕರ್ನಾಟಕದ ದಾವನಣಗೆರೆ ನಗರಕ್ಕೆ ವೈಯಕ್ತಿಕ ಕೆಲಸ, ಆಸ್ಪತ್ರೆಗೆ ಮತ್ತು ಬೇರೆ ಬೇರೆ ಕೆಲಸಗಳಿಗೆ ಬರುವ ಸಾರ್ವಜನಿಕರಿಗೆ ಪ್ರತಿ ದಿನ ಮಧ್ಯಾಹ್ನ 1 ಗಂಟೆಗೆ ಉಚಿತ ಊಟ ವಿತರಣೆ ಮಾಡಲಾಗುವುದು.

ಆವರಗೊಳ್ಳ ಪುರವರ್ಗ ಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಂಸ್ಥಾಪಕ ರಾಜ್ಯಾಧ್ಯಕ್ಷ ಟಿ. ವೆಂಕಟೇಶ್ ಕಣ್ಣಾಳರ, ಇಎನ್‌ಟಿ ತಜ್ಞ ಡಾ. ಎ.ಎಂ. ಶಿವಕುಮಾರ್, ಮಾಜಿ ಮೇಯರ್ ಎಸ್.ಟಿ. ವೀರೇಶ್, ಡಿ.ಎಸ್. ಸಿದ್ಧಣ್ಣ, ಎಸ್.ಕೆ. ಬಸವರಾಜ್, ಎಸ್.ಜಿ. ಹಾಲೇಶಪ್ಪ, ಹೆಚ್.ಸಿ. ಬಸವರಾಜು, ಗುತ್ತೇಶ್, ನಾಗಭೂಷಣ, ಶಿವರಾಜ್, ರಾಜೇಶ್ವರಿ ಅಂಜನಪ್ಪ, ಹೊನ್ನಮ್ಮ, ಎಂ.ಎಸ್. ಬಸಣ್ಣ, ಹುಲ್ಲುಮನಿ ಠಾಕೂರು ಮತ್ತಿತರರು ಭಾಗವಹಿಸಿದ್ದರು.

# ಕತಾರ್‌ನಲ್ಲಿ ಬಂಧಿತ ಎಂಟು ಭಾರತೀಯರ ಬಿಡುಗಡೆ

ನವದೆಹಲಿ, ಫೆ. 12 – ಕತಾರ್‌ನಲ್ಲಿ ಬಂಧಿತರಾಗಿದ್ದ ಭಾರತೀಯ ನೌಕಾ ದಳದ ಎಂಟು ಮಾಜಿ ಸಿಬ್ಬಂದಿಯನ್ನು ಬಿಡುಗಡೆ ಮಾಡಲಾಗಿದ್ದು, ಇವರಲ್ಲಿ ಏಳು ಜನ ದೇಶಕ್ಕೆ ಮರಳಿದ್ದಾರೆ.

ಮೂರೂವರೆ ತಿಂಗಳ ಹಿಂದೆ ಕತಾರ್ ನ್ಯಾಯಾಲಯ ಅವರಿಗೆ ಮರಣ ದಂಡನೆ ವಿಧಿಸಿತ್ತು. ನಂತರ ಈ ಶಿಕ್ಷೆಯನ್ನು ವಿವಿಧ ಅವಧಿಯ ಜೈಲು ಶಿಕ್ಷೆಯಾಗಿ ಪರಿವರ್ತಿಸಲಾಗಿತ್ತು.

ಈ ಬಗ್ಗೆ ಹೇಳಿಕೆ ನೀಡಿರುವ ವಿದೇಶಾಂಗ ಕಾರ್ಯದರ್ಶಿ ವಿನಯ್ ಕ್ವಾಟ್ರ, ಏಳು ಭಾರತೀಯರು ಬೆಳಗಿನ ಜಾವ 2.35ರ ಸಮಯದಲ್ಲಿ ಖಾಸಗಿ ವಿಮಾನದಲ್ಲಿ ದೆಹಲಿ ತಲುಪಿದ್ದಾರೆ ಎಂದು ತಿಳಿಸಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಬುಧವಾರ ಕತಾರ್ ರಾಜಧಾನಿ ದೋಹಾಗೆ ತೆರಳಲಿದ್ದಾರೆ. ಇದಕ್ಕೂ ಮೊದಲು ಅವರು ಯು.ಎ.ಇ.ನಲ್ಲಿ ಎರಡು ವಾರ ಪ್ರವಾಸ ಮಾಡಲಿದ್ದಾರೆ.

ಎಂಟನೇ ಭಾರತೀಯನನ್ನು ತ್ವರಿತವಾಗಿ ವಾಪಸ್ ಕರೆ ತರಲು ಕತಾರ್ ಸರ್ಕಾರದ ಜೊತೆ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ವಿದೇಶಾಂಗ ಕಾರ್ಯದರ್ಶಿ ತಿಳಿಸಿದ್ದಾರೆ.

ನೌಕಾ ದಳದ ಮಾಜಿ ಸಿಬ್ಬಂದಿ ವಿರುದ್ಧ ಬೇಹುಗಾರಿಕೆ ಆರೋಪ ದಾಖಲಿಸಲಾಗಿತ್ತು ಎಂದು ಹೇಳಲಾಗುತ್ತಿದೆ. ಆದರೆ, ಕತಾರ್ ಇಲ್ಲವೇ ನವದೆಹಲಿ ಅಧಿಕಾರಿಗಳು ಈ ಬಗ್ಗೆ ಸಾರ್ವಜನಿಕವಾಗಿ ಯಾವುದೇ ಹೇಳಿಕೆ ನೀಡಿಲ್ಲ.

ಈ ಭಾರತೀಯರು ಅಲ್ ದಹ್ರ ಎಂಬ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಆಗಸ್ಟ್ 2022ರಲ್ಲಿ ಅವರನ್ನು ಬಂಧಿಸಲಾಗಿತ್ತು.

## ತೆರಿಗೆ ಹಣ ಹಂಚಿಕೆಯಲ್ಲಿ ಕೇಂದ್ರದಿಂದ ಅನ್ಯಾಯ

# ಸಂಸದರ ಕಚೇರಿ ಮುಂದೆ ಸಿಪಿಐ ಪ್ರತಿಭಟನೆ




ದಾವಣಗೆರೆ, ಫೆ.12- ಜಿಎಸ್‌ಟಿ, ತೆರಿಗೆ ಹಣ, ಬರ ಪರಿಹಾರ ಸೇರಿದಂತೆ ವಿವಿಧ ಅನುದಾನಗಳನ್ನು ರಾಜ್ಯಗಳಿಗೆ ಹಂಚಿಕೆ ಮಾಡುವ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಎಸಗುತ್ತಿರುವ ಅನ್ಯಾಯ ಮತ್ತು ತಾರತಾಮ್ಯ ನೀತಿಯನ್ನು ಖಂಡಿಸಿ, ನಗರದ ಸಂಸದ ಜಿ.ಎಂ. ಸಿದ್ದೇಶ್ವರ ಅವರ ಕಚೇರಿ ಮುಂಭಾಗ ಇಂದು ಸಿಪಿಐ ಜಿಲ್ಲಾ ಮಂಡಳಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಕಳೆದ 4 ವರ್ಷಗಳಿಂದ ರಾಜ್ಯಗಳಿಗೆ ಲಭಿಸಬೇಕಾದ ತೆರಿಗೆ ಹಂಚಿಕೆಯಲ್ಲಿ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯಕ್ಕೆ ಅನ್ಯಾಯ ಎಸಗಿದ್ದು, ಸುಮಾರು 45 ಸಾವಿರ ಕೋಟಿ ನಷ್ಟವಾಗಿದೆ ಎಂದು ರಾಜ್ಯದ ಮುಖ್ಯಮಂತ್ರಿಗಳೇ ಅಂಕಿ-ಅಂಶಗಳನ್ನು ಬಹಿರಂಗಪಡಿಸಿದ್ದಾರೆ. ಇದರೊಂದಿಗೆ ರಾಜ್ಯದ ಬರ ಪರಿಹಾರದ ಅನುದಾನವನ್ನು ಬಿಡುಗಡೆಗೊಳಿಸದೇ ಇರುವುದು ರಾಜ್ಯಕ್ಕೆ ಮಾಡಿರುವ ಮಹಾ ಅನ್ಯಾಯವೇ ಆಗಿದೆ. ರಾಜ್ಯದ ಪಾಲಿನ ತೆರಿಗೆ ಹಣ ಸೇರಿದಂತೆ ನೆಲ, ಜಲ, ಭಾಷೆಯಂತಹ ರಾಜ್ಯದ ಅಸ್ಮಿತೆಯ ಪ್ರಶ್ನೆಗಳು ಎದುರಾದಾಗ, ರಾಜ್ಯದ ಪರ ಧ್ವನಿ ಎತ್ತದೇ ಮೌನ ತಾಳಿರುವುದು ಸಂಸದರ ನಿರ್ಲಕ್ಷ್ಯತನ ಎಂದು ಆಕ್ರೋಶ ವ್ಯಕ್ತಪಡಿಸಲಾಯಿತು.

ಆವರಗೆರೆ ಚಂದ್ರು, ಹೆಚ್.ಜಿ. ಉಮೇಶ್, ಆವರಗೆರೆ ವಾಸು, ಆನಂದರಾಜು, ಸಿ. ರಮೇಶ್ ಪಿ.ಷಣ್ಮುಖ ಸ್ವಾಮಿ, ಎ.ಬಿ. ಸಾವಿತ್ರಮ್ಮ, ಸಿ. ರಮೇಶ್, ಕೃಷ್ಣಪ್ಪ, ಹೆಚ್.ಪಿ. ಉಮಾಪತಿ, ನಾಗಮ್ಮ, ಭಾಗ್ಯ ಇತರರು ಪ್ರತಿಭಟನೆಯಲ್ಲಿದ್ದರು.

# ರಾಜ್ಯಸಭೆ ಚುನಾವಣೆ : ಐದನೇ ಅಭ್ಯರ್ಥಿಗಾಗಿ ಬಿಜೆಪಿ ಚಿಂತನೆ

ಬೆಂಗಳೂರು, ಫೆ. 12 - ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 27ರಂದು ನಡೆಯಲಿರುವ ದ್ವೈವಾರ್ಷಿಕ ಚುನಾವಣೆಗೆ ಬಿಜೆಪಿ-ಜೆಡಿಎಸ್ ಎನ್‌ಡಿಎ ಕೂಟದಿಂದ ಐದನೇ ಅಭ್ಯರ್ಥಿಯನ್ನು ನಿಲ್ಲಿಸುವ ಚಿಂತನೆಯಲ್ಲಿದೆ.

ಈಗಾಗಲೇ ಸುಲಭವಾಗಿ ಗೆಲ್ಲಬಹುದಾದ ಒಂದು ಸ್ಥಾನಕ್ಕೆ ನಾರಾಯಣ ಸಾ ಬಾಂಡಗೆ ಅವರನ್ನು ಅಭ್ಯರ್ಥಿಯನ್ನಾಗಿ ಮಾಡಿದೆ.

ಉಳಿದಿರುವ ತಮ್ಮ ಹೆಚ್ಚುವರಿ ಮತಗಳ ಜೊತೆಗೆ ಕಾಂಗ್ರೆಸ್ ಹಾಗೂ ಪಕ್ಷೇತರ ಶಾಸಕರ ಮತ ಪಡೆದು ಗೆಲ್ಲಬಹುದಾದ ವ್ಯಕ್ತಿಗಾಗಿ ಶೋಧ ಮುಂದುವರೆದಿದೆ.

ಉದ್ಯಮಿಗಳಾದ ಪ್ರಕಾಶ್ ಶೆಟ್ಟಿ, ಕುಪೇಂದ್ರ ರೆಡ್ಡಿ ಹಾಗೂ ಬಿ. ಎಂ.ಫಾರೂಕ್ ಅವರ ಹೆಸರುಗಳು ಮುಂಚೂಣಿಯಲ್ಲಿವೆ.

ಎರಡನೇ ಅಭ್ಯರ್ಥಿ ಕಣಕ್ಕಿಳಿಸುವ ಬಗ್ಗೆ ಪಕ್ಷದಲ್ಲೇ ಪರ-ವಿರೋಧವಿದೆ. ಲೋಕಸಭಾ ಚುನಾವಣಾ ಸಮೀಪದಲ್ಲಿ ಇಕ್ಕಟ್ಟಿಗೆ ಸಿಲುಕುವುದು ಬೇಡ. ಕಾಂಗ್ರೆಸ್ ಸರ್ಕಾರದಲ್ಲಿ ಬಲಿಷ್ಠರಿದ್ದಾರೆ. ಅವರು ನಮ್ಮವರನ್ನೇ ಖರೀದಿಸಿದರೆ ಮುಖಭಂಗಕ್ಕೆ ಒಳಗಾಗುತ್ತೇವೆ ಎಂದು ಪಕ್ಷದ ನಾಯಕರುಗಳಿಗೆ ಮನವರಿಕೆ ಮಾಡಿದ್ದಾರೆ.

ವಿಧಾನಸಭೆಯಲ್ಲಿನ ಸದಸ್ಯ ಬಲದ ಆಧಾರದ ಮೇಲೆ ಕಾಂಗ್ರೆಸ್‌ಗೆ ಸುಲಭವಾಗಿ ಮೂರು ಸ್ಥಾನಗಳು ದೊರೆಯಲಿದ್ದು, ಅಭ್ಯರ್ಥಿಗಳ ಆಯ್ಕೆಗೆ ಬುಧವಾರ ನಗರದಲ್ಲೇ ಕೇಂದ್ರೀಯ ಚುನಾವಣಾ ಸಮಿತಿ ಸಭೆ ನಡೆಯಲಿದೆ. ಸಭೆಯಲ್ಲಿ ಮೂವರು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಅಂದೇ ನಾಮಪತ್ರ ಸಲ್ಲಿಸುವ ಸಾಧ್ಯತೆ ಇದೆ.

ಚುನಾವಣಾ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳಲು ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಮುಕುಲ್ ವಾಸ್ನಿಕ್ ಹಾಗೂ ರಾಜ್ಯ ಉಸ್ತುವಾರಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ನಗರಕ್ಕೆ ಆಗಮಿಸಲಿದ್ದಾರೆ.

# ಮಹಾರಾಷ್ಟ್ರ : ಕಾಂಗ್ರೆಸ್ ತೊರೆದ ಮಾಜಿ ಮುಖ್ಯಮಂತ್ರಿ ಚವಾಣ್



ಮುಂಬೈ, ಫೆ. 12 - ಮಹಾರಾಷ್ಟ್ರ ಮಾಜಿ ಮುಖ್ಯಮಂತ್ರಿ ಅಶೋಕ್ ಚವಾಣ್ ಅವರು ಸೋಮವಾರ ಕಾಂಗ್ರೆಸ್ ತೊರೆದಿದ್ದಾರೆ. ಬಿಜೆಪಿ ಸೇರುವ ಬಗ್ಗೆ ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ, ಒಂದೆರಡು ದಿನಗಳಲ್ಲಿ ಮುಂದಿನ ನಿರ್ಧಾರ ತೆಗೆದುಕೊಳ್ಳುವುದಾಗಿ ಅವರು ಹೇಳಿದ್ದಾರೆ.

ರಾಜ್ಯ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ ಅವರಿಗೆ ಪತ್ರ ಬರೆದಿರುವ ಚವಾಣ್, ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜೀನಾಮೆ ನೀಡುತ್ತಿರುವುದಾಗಿ ತಿಳಿಸಿದ್ದಾರೆ. ಅಲ್ಲದೇ, ಶಾಸಕ ಸ್ಥಾನಕ್ಕೂ ರಾಜೀನಾಮೆ ನೀಡಿದ್ದಾರೆ.

ನಂತರ ಪತ್ರಕರ್ತರೊಂದಿಗೆ ಮಾತನಾಡಿರುವ ಅವರು, ಪಕ್ಷದಲ್ಲಿ ನಡೆದ ಘಟನೆಗಳನ್ನು ಸಾರ್ವಜನಿಕ ವೇದಿಕೆಯಲ್ಲಿ ಚರ್ಚಿಸಲು ಬಯಸುವುದಿಲ್ಲ ಎಂದಿದ್ದಾರೆ. ಚವಾಣ್ ಬಿಜೆಪಿ ಸೇರಲಿದ್ದಾರೆ ಎಂದು ಹೇಳಲಾಗುತ್ತಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಮುಂದೆ ಏನಾಗುತ್ತದೆ ಎಂಬುದನ್ನು ಕಾದು ನೋಡಿ ಎಂದಿದ್ದಾರೆ.

ಈ ಬೆಳವಣಿಗೆ ಬಗ್ಗೆ ಲೇವಡಿ ಮಾಡಿರುವ ಶಿವಸೇನೆ (ಯು.ಬಿ.ಟಿ.) ನಾಯಕ ಉದ್ಧವ್ ಠಾಕ್ರೆ, ಭಾರತೀಯ ಜನತಾ ಪಾರ್ಟಿ ಈಗ 'ಕಾಂಗ್ರೆಸ್ ಆಕ್ರಮಿತ ಬಿಜೆಪಿ' ಆಗುತ್ತಿದೆ ಎಂದಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು 400 ಸ್ಥಾನಗಳಲ್ಲಿ ಗೆಲ್ಲುವುದಾಗಿ ಲೋಕಸಭೆಯಲ್ಲಿ ಎದೆ ತಟ್ಟಿಕೊಂಡು ಹೇಳುತ್ತಿದ್ದಾರೆ. ಹೀಗಿರುವಾಗ ಬೇರೆ ಪಕ್ಷಗಳನ್ನು ಏಕೆ ಒಡೆಯುತ್ತಿದ್ದಾರೆ? ಎಷ್ಟೊಂದು ಕಾಂಗ್ರೆಸ್ ನಾಯಕರನ್ನು ಬಿಜೆಪಿಯಲ್ಲಿ ಸೇರ್ಪಡೆ ಮಾಡಿಕೊಳ್ಳಲಾಗಿದೆ. ಮುಂದೊಂದು ದಿನ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷರೂ ಕಾಂಗ್ರೆಸ್‌ನಿಂದ ಬಂದವರೇ ಆಗಿರಲಿದ್ದಾರೆ ಎಂದು ಠಾಕ್ರೆ ಹೇಳಿದ್ದಾರೆ.

ಈ ಬಗ್ಗೆ ಹೇಳಿಕೆ ನೀಡಿರುವ ಮಹಾರಾಷ್ಟ್ರ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ, ಕಾಂಗ್ರೆಸ್ ಪಕ್ಷ ಹಲವಾರು ನಾಯಕರಿಗೆ ಸಾಕಷ್ಟು ಕೊಟ್ಟಿದೆ. ಪಕ್ಷ ಈಗ ಪ್ರಜಾಪ್ರಭುತ್ವ ಹಾಗೂ ಸಂವಿಧಾನ ಉಳಿಸುವ ಪ್ರಯತ್ನದಲ್ಲಿದೆ. ನಾವೆಲ್ಲರೂ ಕಾಂಗ್ರೆಸ್ ಪಕ್ಷಕ್ಕೆ ನಿಷ್ಠವಾಗಿದ್ದೇವೆ. ಬಿಜೆಪಿಯ ಸರ್ವಾಧಿಕಾರತ್ವ ಸೋಲಿಸುತ್ತೇವೆ ಎಂದಿದ್ದಾರೆ.

# ಬಂಜಾರ ಸಮಾಜದ ಪರಂಪರೆ, ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ

## ಮಾಡ್ಲಗೇರಿ ತಾಂಡಾದಲ್ಲಿ 22ನೇ ವರ್ಷದ ಮಾಲಾಧಾರಿಗಳ ಪಾದಯಾತ್ರೆ ಕಾರ್ಯಕ್ರಮದಲ್ಲಿ ಮುಖಂಡರ ಸ್ಮರಣೆ



ಹರಪನಹಳ್ಳಿ,ಫೆ.12- ಗೋರ್ ಬಂಜಾರ ಸಮಾಜದ ಪರಂಪರೆ, ಸಂಸ್ಕೃತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ಕೆಲವು ಲೇಖನ ಮತ್ತು ಪ್ರವಾಸಿಗರ ಬರಹಗಳಲ್ಲಿ ಬಂಜಾರರ ಕುರಿತು ಉಲ್ಲೇಖಿಸಲಾಗಿದೆ. ಬಂಜಾರರ ಸಂಸ್ಕೃತಿಯು ಜೀವನದ ನಾನಾ ಆಯಾಮ, ಧ್ಯೇಯ, ತತ್ವ-ಸಿದ್ಧಾಂತಗಳ ಸಮನ್ವಯ ಸ್ವರೂಪವಾಗಿರುವುದು ಅವರ ಜನಪದ ಹಾಡು ಮತ್ತು ಮೌಖಿಕ ಸಾಹಿತ್ಯದಿಂದ ಗೋಚರವಾಗುತ್ತದೆ ಎಂದು ಸಮಾಜದ ಮುಖಂಡರು ಅಭಿಪ್ರಾಯಿಸಿದರು.

ಶ್ರೀ ಸೇವಾಲಾಲ್ ಮಹಾರಾಜರ 285ನೇ ಜಯಂತ್ಯೋತ್ಸವದ ಅಂಗವಾಗಿ ತಾಲೂಕಿನ ಮಾಡಗೇರಿ ತಾಂಡಾದಲ್ಲಿ 22ನೇ ವರ್ಷದ ಮಾಲಾಧಾರಿಗಳ ಪಾದಯಾತ್ರೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಈ ನಮ್ಮ ಪುಣ್ಯ ಭೂಮಿಯಲ್ಲಿ ಶ್ರೀ ಭೀಮಾನಾಯ್ಕ, ಧರ್ಮಿಣಿ ಮಾತೆಯ ಜೇಷ್ಠ ಪುತ್ರ ಬಂಜಾರ್ ಜನಾಂಗದ ಆರಾಧ್ಯ ದೇವ, ಬ್ರಹ್ಮಚಾರಿಯಾಗಿ ಮಹಾ ಪವಾಡ ಪುರುಷರಾಗಿ ಬಂಜಾರ ಜನಾಂಗದ ಉದ್ಧಾರಕ್ಕಾಗಿ ಶ್ರಮಿಸಿದ ಧಾರ್ಮಿಕ ಗುರುಗಳ ಹೆಸರಿನಲ್ಲಿ ಧರಿಸಿರುವ ಮಾಲೆ ಬಹಳ ಪವಿತ್ರವಾದದ್ದು, ಎಲ್ಲರೂ ಭಕ್ತಿಯಿಂದ ಶ್ರದ್ಧೆಯಿಂದ ನಡೆದುಕೊಳ್ಳುತ್ತಾರೆ.

ಸಂತ ಶ್ರೀ ಸೇವಾಲಾಲ್ ಜಗದ್ಗುರುಗಳ ದಯೆಯಿಂದ ಅಶಾಂತಿ, ಅಜ್ಞಾನ, ಅಂಧಕಾರ, ಅಹಂಕಾರವನ್ನು ಹೋಗಲಾಡಿಸಿ ಶಾಂತಿ, ದಯೆ, ಕರುಣೆ, ಭಕ್ತಿಯಿಂದ ಮುಕ್ತಿ ಹೊಂದಿ ಜ್ಞಾನದ ಜ್ಯೋತಿ ಬೆಳಗಿಸಲು ಈ ಮಹಾ ಪುರುಷನ ಹೆಸರಿನಲ್ಲಿ ಮಾಲೆ ಧರಿಸಿರುವ ಮಾಲಾಧಾರಿಗಳಿಗೆ ಪ್ರತಿವರ್ಷ ಕೈಲಾದಷ್ಟು ಸಹಾಯವನ್ನು ಭಕ್ತಾದಿಗಳು ನೀಡುತ್ತಾರೆ ಎಂದು ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮಾಡ್ಲಗೇರಿ ತಾಂಡಾದ ಹಟ್ಟಿನಾಯ್ಕ ಎಂ.ಪಿ.ನಾಯ್ಕ, ಡಾವೋ ಗೇಮ್ಯಾನಾಯ್ಕ, ಕಾರಬಾರಿ ಯಂಕ್ಯಾನಾಯ್ಕ, ಗ್ರಾ.ಪಂ.ಸದಸ್ಯ ಎಂ. ಹಾಲೇಶ್ ನಾಯ್ಕ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ನಾಗೇಂದ್ರ ನಾಯ್ಕ, ಗ್ರಾ.ಪಂ. ಮಾಜಿ ಸದಸ್ಯ ಆರ್. ಮಲ್ಲೇಶ್ ನಾಯ್ಕ, ಎಂ. ಕೊಟ್ರೇಶ್ ನಾಯ್ಕ, ವಿ. ಮಲ್ಲೇಶ್ ನಾಯ್ಕ, ಪೂಜಾರಿ ಶೇಖರ್ ನಾಯ್ಕ, ಆರ್. ಚೆನ್ನವೀರನಾಯ್ಕ, ಚುಣ್ಯಾನಾಯ್ಕ, ಲಂಕೇಶ್ ನಾಯ್ಕ, ಎಂ.ಎಸ್.ನಾಯ್ಕ, ವಿ.ರಾಮನಾಯ್ಕ, ಡಿ.ರಮೇಶ್ ನಾಯ್ಕ, ವಿ.ಗಣೇಶ್ ನಾಯ್ಕ, ಎಲ್. ಭೀಮಾನಾಯ್ಕ, ಹೋಭ್ಯಾನಾಯ್ಕ, ಬಿ.ಯುವರಾಜ್ ನಾಯ್ಕ, ಕೃಷ್ಣನಾಯ್ಕ, ಎಂ.ರಮೇಶ್ ನಾಯ್ಕ, ಹೆಚ್. ಮಹೇಶ್ ನಾಯ್ಕ, ವಿ. ಸಂತೋಷ್ ನಾಯ್ಕ, ಜಿ.ಶಂಕರ್ ನಾಯ್ಕ, ಪ್ರವೀಣ್ ಕುಮಾರ್, ಡಿ.ಮಲ್ಲೇಶ್ ನಾಯ್ಕ ಸೇರಿದಂತೆ ಇತರರು ಉಪಸ್ಥಿತರಿದ್ದರು.


## ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀ ಬಿ.ಎಂ. ಕರಿಬಸಪ್ಪ ಬಿನ್ ಲೇಟ್ ಮಹೇಶ್ವರಪ್ಪ, ವಯಸ್ಸು 50 ವರ್ಷ, ವಾಸ. ಆನೆಕೊಂಡ ದಾವಣಗೆರೆ, ಆದ ಇವರುಗಳ ಮಾಹಿತಿ ಮೇರೆಗೆ ಸಾರ್ವಜನಿಕ ಪ್ರಕಟಣ ನೋಟೀಸ್ ಏನೆಂದರೆ,

ನೋಟೀಸ್ ಷೆಡ್ಯೂಲ್‌ನಲ್ಲಿ ವಿವರಿಸಿರುವ ವಾಸದ ಮನೆ ಸೊತ್ತನ್ನು ಅದರ ಮಾಲೀಕರಾದ ಶ್ರೀಯುತ ಕೆ.ಕೊಂಡಾರೆಡ್ಡಿ ಬಿನ್ ವೆಂಗಲರೆಡ್ಡಿ ವಾಸ. ಎಸ್.ಎಸ್. ಬಡಾವಣೆ, ದಾವಣಗೆರೆ ಆದ ಇವರುಗಳಿಂದ ನಮ್ಮ ಕಕ್ಷಿದಾರರು ಖರೀದಿ ಮಾಡಲು ಇಚ್ಛಿಸಿದ್ದು, ಈ ಬಗ್ಗೆ ಷೆಡ್ಯೂಲ್ ಸೊತ್ತಿನ ಮಾಲೀಕರಿಂದ ಕ್ರಯದ ಮಾತುಕತೆ ನಡೆಸಿರುತ್ತಾರೆ.

ಷೆಡ್ಯೂಲ್ ಸೊತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿ ಹಿತಾಸಕ್ತಿ, ಹಕ್ಕು, ಅಧಿಕಾರ, ಇದ್ದಲ್ಲಿ ಅಂತವರು ಈ ಕೆಳಗೆ ನಮೂದಿಸಿರುವ ವಕೀಲರ ವಿಳಾಸಕ್ಕೆ ಈ ಪ್ರಕಟಣೆ ದಿನಾಂಕದಿಂದ 7 ದಿವಸದ ವರೆಗೆ ಲಿಖಿತವಾಗಿ ದಾಖಲೆಗಳೊಂದಿಗೆ ತಮ್ಮ ತಕರಾರನ್ನು ಸಲ್ಲಿಸಬಹುದು.

ಒಂದು ವೇಳೆ ಯಾರಿಂದಲಾದರು ಯಾವುದೇ ರಿತಿ ತಕರಾರು ಇಲ್ಲವೆಂದರೆ ನಮ್ಮ ಕಕ್ಷಿದಾರರು ಷೆಡ್ಯೂಲ್ ಸೊತ್ತಿನ ಬಗ್ಗೆ ವ್ಯವಹಾರವನ್ನು ಅದರ ಮಾಲೀಕರೊಂದಿಗೆ ಮುಂದುವರೆಸಿ ಕ್ರಯ ನೊಂದಣಿ ಮಾಡಿಕೊಳ್ಳುವವರಿದ್ದಾರೆ. ಅವಧಿ ಮುಗಿದ ನಂತರ ಯಾವುದೇ 803 ತಕರಾರು ಬಂದಲ್ಲಿ ಅದು ನಮ್ಮ ಕಕ್ಷಿದಾರರಿಗೆ ಬಂಧನಕಾರಿಯಾಗುವುದಿಲ್ಲ ಎಂದು ಈ ಪ್ರಕಟಣೆ ಮೂಲಕ ತಿಳಿಸಲಾಗಿದೆ.

ಷೆಡ್ಯೂಲ್ : ದಾವಣಗೆರೆ ಸಬ್ ರಿಜಿಸ್ಟ್ರಾರ್ ಕಛೇರಿ ಅಧಿಕಾರಕ್ಕೆ ಒಳಪಟ್ಟ, ನಿಟ್ಟುವಳ್ಳಿ ಡಿವಿಜನ್‌ನಲ್ಲಿ ಬರತಕ್ಕ, ಡೋರ್ ನಂ. 1674/27, ಇ-ಸ್ವತ್ತು ನಂ. 5827826507 ಸೊತ್ತಿನಲ್ಲಿ ನಿರ್ಮಿಸಿರುವ ನೆಲಮಹಡಿ, ಮೊದಲನೇ ಮಹಡಿ ಮತ್ತು 2ನೇ ಮಹಡಿಯ ವಾಸದ ಮನೆ ಇದರ ಅಳತೆ ಪೂರ್ವ-ಪಶ್ಚಿಮ 9.753620 × ಉತ್ತರ-ದಕ್ಷಿಣ 8.229616 ಮೀಟರ್, (32×27 ಅಡಿ) ಸದರಿ ಸದರಿ ಸೊತ್ತಿಗೆ ಚಕ್ಕುಬಂದಿ :- ಪೂರ್ವಕ್ಕೆ : ನಿವೇಶನ ನಂ.2, ಪಶ್ಚಿಮಕ್ಕೆ : ಪ್ಯಾಸೇಜ್, ಉತ್ತರಕ್ಕೆ : ನಿವೇಶನ ನಂ. 3, ದಕ್ಷಿಣಕ್ಕೆ : ಸರ್ವೇ ನಂಬರಿನ ಸೊತ್ತು.

ವಕೀಲರ ವಿಳಾಸ :
ಎಸ್.ನಾಗರಾಜ್, ಬಿ.ಕಾಂ. ಎಲ್‌ಎಲ್.,ಬಿ
(ಆನೆಕೊಂಡ)
ರೂಂ. ನಂ. 3, ಅಮರ್ ಬಿಲ್ಡಿಂಗ್,
7ನೇ ಕ್ರಾಸ್, ಪಿ.ಜೆ. ಬಡಾವಣೆ, ದಾವಣಗೆರೆ.

ಇಂತಿ ತಮ್ಮ ವಿಶ್ವಾಸಿ,
ಎಸ್. ನಾಗರಾಜ್,
ವಕೀಲರು

# ಮಕ್ಕಳಿಗೆ ಶ್ರದ್ಧೆ, ಶಿಸ್ತು ಕಲಿಸಲು ಗುರುರಾಜ ಕರ್ಜಗಿ ಸಲಹೆ



ಮಲೇಬೆನ್ನೂರು, ಫೆ.12- ಮಕ್ಕಳಿಗೆ ಎಲ್ಲಾ ಅನುಭವ ಕೊಟ್ಟಾಗ ಮಾತ್ರ ಅವರು ಚೈತನ್ಯಶೀಲರಾಗಿರುತ್ತಾರೆ ಮತ್ತು ಸಂಸ್ಕಾರಗಳಿಂದ ಸುಸಂಸ್ಕೃತರಾಗುತ್ತಾರೆ ಎಂದು ಬೆಂಗಳೂರಿನ ಸೃಜನಶೀಲ ಅಧ್ಯಾಪನ ಕೇಂದ್ರದ ಅಧ್ಯಕ್ಷರೂ ಆದ ಶಿಕ್ಷಣ ತಜ್ಞ ಡಾ. ಗುರುರಾಜ ಕರ್ಜಗಿ ಹೇಳಿದರು.

ಕುಂಬಳೂರು ಗ್ರಾಮದ ಹೊರ ವಲಯದಲ್ಲಿರುವ ಚಿಟ್ಟಕ್ಕಿ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಮೊನ್ನೆ ಹಮ್ಮಿಕೊಂಡಿದ್ದ ಚಿಟ್ಟಕ್ಕಿ ಸಾಂಸ್ಕೃತಿಕ ಉತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳಲ್ಲಿ ಬಹುಮುಖ್ಯವಾಗಿ ಶ್ರದ್ಧೆ ಬೆಳಸಬೇಕು. ಶ್ರದ್ಧೆ, ಶಿಸ್ತು ಕಲಿಸದಿದ್ದರೆ ಅವರು ಯಶಸ್ಸು ಸಾಧಿಸಲು ಸಾಧ್ಯವಿಲ್ಲ ಎಂದ ಕರ್ಜಗಿ ಅವರು, ಮಕ್ಕಳಿಗೆ ಜಗತ್ತಿನ ಬಗ್ಗೆ ಒಳ್ಳೆಯ ಭಾವನೆ ಮೂಡಿಸಿ, ಅವರ ಮುಂದೆ ನೆಗೆಟಿವ್ ಮಾತನಾಡಬೇಡಿ ಎಂದು ಪೋಷಕರಿಗೆ ಕಿವಿಮಾತು ಹೇಳಿದರು.

ತಾಯಂದಿರು 2 ಸೀರಿಯಲ್ ನೋಡುವುದನ್ನು ತ್ಯಾಗ ಮಾಡಿ, ಮಕ್ಕಳ ಕಲಿಕೆ ಬಗ್ಗೆ ನಿಗಾವಹಿಸಬೇಕು. ಅವರಿಗೆ ಪ್ರೀತಿ ಬಗ್ಗೆ ತಿಳಿಸಬೇಕು. ಅವರ ಮುಂದೆ ಇನ್ನೊಬ್ಬರನ್ನು ಟೀಕೆ ಮಾಡಿ ಮಾತನಾಡಬಾರದು. ಸಂಸ್ಕೃತಿಯ ಮೂಲ ಶ್ರದ್ಧೆಯಾಗಿದ್ದು, ಮಾಡುವ ಕೆಲಸದಲ್ಲಿ ಶ್ರದ್ಧೆ, ದೇವರಲ್ಲಿ ನಂಬಿಕೆ ಇಟ್ಟುಕೊಳ್ಳುವುದನ್ನು ಹೇಳಿಕೊಡಿ ಎಂದು ಪೋಷಕರಿಗೆ ತಿಳಿಸಿದರು.

ನಾವು ಕಲಿಸುವ ಶಿಕ್ಷಣ ಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚುವಂತಿರಬೇಕೆಂದು ಶಿಕ್ಷಕರಿಗೆ ಹೇಳಿದ ಕರ್ಜಗಿ ಅವರು, ತಂದೆ-ತಾಯಿ ಮತ್ತು ಶಿಕ್ಷಕರು ಸೇರಿ ಬೆಳೆಸಿದಾಗ ಮಾತ್ರ ಮಗು ವಿದ್ಯಾವಂತ, ಸುಸಂಸ್ಕೃತನಾಗಿ ಬೆಳೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಾಲೆಯ ಆಡಳಿತಾಧಿಕಾರಿ ಎಸ್.ಕೆ.ಕುಮಾರ್ ಅವರು, ಶೀಘ್ರದಲ್ಲೇ ಸುಮಾರು 50 ಲಕ್ಷ ರೂ. ವೆಚ್ಚದಲ್ಲಿ ಒಳಾಂಗಣ ಕ್ರೀಡಾಂಗಣ ಮತ್ತು 10 ಕೋಟಿ ರೂ. ವೆಚ್ಚದಲ್ಲಿ ಹಾಸ್ಟೆಲ್ ನಿರ್ಮಿಸುವ ಕಾಮಗಾರಿಗೆ ಚಾಲನೆ ನೀಡಲಿದ್ದೇವೆ. ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ನೀಡುವುದು ಮತ್ತು ಸಾಮಾಜಿಕ ಹೊಣೆಗಾರಿಕೆಯೇ ನಮ್ಮ ಪ್ರಮುಖ ಗುರಿಯಾಗಿದೆ ಎಂದು ಕುಮಾರ್ ಹೇಳಿದರು.

ಬಿಇಓ ಹನುಮಂತಪ್ಪ ಮಾತನಾಡಿದರು. ಎಸ್‌ಡಿಎಲ್ ವಿದ್ಯಾಸಂಸ್ಥೆ ಅಧ್ಯಕ್ಷ ಹಾಗೂ ವರ್ತಕ ಚಿಟ್ಟಕ್ಕಿ ರಮೇಶ್ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾಸಂಸ್ಥೆಯ ಉಪಾಧ್ಯಕ್ಷೆ ಸುಧಾ ರಮೇಶ್, ಕಾರ್ಯದರ್ಶಿ ಮಹಾಂತೇಶ್ ಸ್ವಾಮಿ ವೇದಿಕೆಯಲ್ಲಿದ್ದರು.

ಚಿಟ್ಟಕ್ಕಿ ಶಾಲೆಯ ಪ್ರಾಂಶುಪಾಲ ಚೇತನ್‌ಕುಮಾರ್ ಸ್ವಾಗತಿಸಿದರು. ಶಿಕ್ಷಕಿ ಅಖಿಲೇಶ್ವರ ವಾರ್ಷಿಕ ವರದಿ ಓದಿದರು. ಶಿಕ್ಷಕಿ ಶಶಿಕುಮಾರಿ ವಂದಿಸಿದರು.

# ಪಡಿತರ ಅಂಗಡಿಗಳ ಎದುರು ಮೋದಿ ಚಿತ್ರ ಹಾಕುವುದಿಲ್ಲ : ಕೇರಳ ಸಿಎಂ

ತಿರುವನಂತಪುರಂ, ಫೆ. 12 - ಕೇರಳದ ಪಡಿತರ ಅಂಗಡಿಗಳ ಎದುರು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಚಿತ್ರ ಇರುವ ಬ್ಯಾನರ್‌ಗಳನ್ನು ಹಾಕುವುದಿಲ್ಲ ಎಂದು ಕೇರಳ ಸರ್ಕಾರ ತಿಳಿಸಿದೆ.

ಕೇಂದ್ರ ಸರ್ಕಾರ ಪ್ರಧಾನಿ ಚಿತ್ರ ಅಳವಡಿಕೆಗೆ ಸೂಚನೆ ನೀಡಿದೆ. ಅಲ್ಲದೇ, ಸೆಲ್ಫಿ ತಾಣಗಳ ಅಭಿಯಾನ ನಡೆಸುವಂತೆಯೂ ತಿಳಿಸಿದೆ.

ಆದರೆ, ಲೋಕಸಭಾ ಚುನಾವಣೆಗಳು ಸನಿಹದಲ್ಲೇ ಇರುವಾಗ, ಈ ಕ್ರಮಗಳೆಲ್ಲ ಬಿಜೆಪಿಯ ಚುನಾವಣಾ ಪ್ರಚಾರದ ಭಾಗವಾಗಿವೆ. ಇವುಗಳ ಜಾರಿ ಸರಿಯಲ್ಲ ಎಂದು ಕೇಂದ್ರ ಸರ್ಕಾರಕ್ಕೆ ತಿಳಿಸಲಾಗುವುದು ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಹೇಳಿದ್ದಾರೆ.

ವಿಧಾನಸಭೆಯಲ್ಲಿ ಐ.ಯು.ಎಂ.ಎಲ್. ಶಾಸಕ ಪಿ. ಅಬ್ದುಲ್ ಹಮೀದ್ ಕೇಳಿದ ಪ್ರಶ್ನೆಗೆ ಈ ಉತ್ತರ ನೀಡಿರುವ ಮುಖ್ಯಮಂತ್ರಿ, ಈ ವಿಷಯದ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲೂ ಅರ್ಜಿ ದಾಖಲಿಸುವುದಾಗಿ ತಿಳಿಸಿದ್ದಾರೆ.

ಇದಕ್ಕೂ ಮುಂಚೆ ಹೇಳಿಕೆ ನೀಡಿದ್ದ ರಾಜ್ಯ ಆಹಾರ ಸಚಿವ ಜಿ.ಆರ್. ಅನಿಲ್, ಕೇರಳದ 14 ಸಾವಿರ ಪಡಿತರ ಅಂಗಡಿಗಳ ಎದುರು ಪ್ರಧಾನ ಮಂತ್ರಿ ಚಿತ್ರ ಇರುವ ಫ್ಲೆಕ್ಸ್ ಹಾಗೂ ಬ್ಯಾನರ್ ಅಳವಡಿಸಬೇಕೆಂದು ಕೇಂದ್ರ ಸರ್ಕಾರ ಸೂಚನೆ ನೀಡಿದೆ ಎಂದು ತಿಳಿಸಿದ್ದರು.

ಅಲ್ಲದೇ, 550 ಪಡಿತರ ಅಂಗಡಿಗಳ ಎದುರು ಪ್ರಧಾನ ಮಂತ್ರಿ ಸೆಲ್ಫಿ ಕೇಂದ್ರಗಳನ್ನು ತೆರೆಯುವಂತೆ ಸೂಚಿಸಲಾಗಿದೆ.

ಆದರೆ, ಚುನಾವಣಾ ವರ್ಷದಲ್ಲಿ ಈ ರೀತಿಯ ಅಭಿಯಾನಗಳನ್ನು ಜಾರಿಗೆ ತರುವುದಿಲ್ಲ ಎಂದೂ ಅನಿಲ್ ತಿಳಿಸಿದ್ದರು.

# ತಮಿಳುನಾಡು : ನಿಮಿಷಗಳಲ್ಲೇ ಮಾತು ಮುಗಿಸಿದ ರಾಜ್ಯಪಾಲರು

**(1ನೇ ಪುಟದಿಂದ)** ರವಿ ಅವರು ರಾಷ್ಟ್ರಗೀತೆಯ ಕುರಿತು ಕೆಲವು ಮಾತುಗಳನ್ನಾಡಿದ್ದರು. ಈ ಮಾತುಗಳನ್ನು ತೆಗೆದು ಹಾಕಿರುವುದಾಗಿ ವಿಧಾನಸಭಾಧ್ಯಕ್ಷ ಎಂ. ಅಪ್ಪವು ಹೇಳಿದ್ದಾರೆ.

ಸದನದ ನಿಯಮಗಳ ಪ್ರಕಾರ ರಾಷ್ಟ್ರಗೀತೆಯನ್ನು ಸದನದ ಕಲಾಪದ ಅಂತ್ಯದ ವೇಳೆ ಹಾಡಲಾಗುತ್ತದೆ ಎಂದು ವಿಧಾನಸಭಾಧ್ಯಕ್ಷರು ಹೇಳಿದ್ದಾರೆ. ನಂತರ ಹೇಳಿಕೆ ನೀಡಿರುವ ರಾಜಭವನ, ರಾಜ್ಯಪಾಲರ ಭಾಷಣದ ಆರಂಭ ಹಾಗೂ ಅಂತ್ಯದಲ್ಲಿ ರಾಷ್ಟ್ರಗೀತೆ ಹಾಡಿಸಲು ವ್ಯವಸ್ಥೆ ಮಾಡಬೇಕು ಎಂದು ತಮಿಳುನಾಡು ಸರ್ಕಾರಕ್ಕೆ ತಿಳಿಸಲಾಗಿತ್ತು. ಇದನ್ನು ತಮಿಳುನಾಡು ಸರ್ಕಾರ ಕಡೆಗಣಿಸಿದೆ ಎಂದು ತಿಳಿಸಿದೆ.

ಅಲ್ಲದೇ, ವಿಧಾನಸಭಾಧ್ಯಕ್ಷರು ರಾಜ್ಯಪಾಲರನ್ನು ನಾಥೂರಾಮ್ ಗೂಡ್ಸೆ ಅನುಯಾಯಿ ಎಂದು ಹೇಳಿದ್ದಾರೆ. ತಮ್ಮ ಕಚೇರಿಯ ಘನತೆಯ ಹಿನ್ನೆಲೆಯಲ್ಲಿ ರಾಜ್ಯಪಾಲರು ಸದನದಿಂದ ಹೊರ ಬಂದಿದ್ದಾರೆ ಎಂದು ತಿಳಿಸಲಾಗಿದೆ.

ವಿಧಾನಸಭಾಧ್ಯಕ್ಷರು ರಾಜ್ಯದ ಪ್ರವಾಹ ಪರಿಹಾರ ಕುರಿತು ಮಾತನಾಡಿದರು. ಇನ್ನೂ ಕೆಲ ಮಾತುಗಳನ್ನು ಆಡಿದರು. ನಂತರ ರಾಜ್ಯಪಾಲ ರವಿ, ರಾಷ್ಟ್ರಗೀತೆ ನುಡಿಸುವ ಮೊದಲೇ ಸದನದಿಂದ ಹೊರ ನಡೆದಿದ್ದರು.

ವರ್ಷದ ಮೊದಲ ಅಧಿವೇಶನದ ಆರಂಭದ ವೇಳೆ ರಾಜ್ಯಪಾಲರು ಸದನವನ್ನು ಉದ್ದೇಶಿಸಿ ಮಾತನಾಡುವುದು ಪದ್ಧತಿಯಾಗಿದೆ. ಇದೇ ಮೊದಲ ಬಾರಿಗೆ ರಾಜ್ಯಪಾಲರು ಸಾಂಪ್ರದಾಯಿಕ ಭಾಷಣ ಮಾಡದೇ ಹೊರ ನಡೆದಿದ್ದಾರೆ. ಕಳೆದ ವರ್ಷ ಸಹ ರಾಜ್ಯಪಾಲ ರವಿ ಅವರು ಸರ್ಕಾರ ಸಿದ್ಧಪಡಿಸಿದ ಭಾಷಣದ ಕೆಲ ಅಂಶಗಳನ್ನು ಕೈ ಬಿಟ್ಟಿದ್ದರು. ಹಾಗೂ ತಮ್ಮ ಕೆಲ ಅಂಶಗಳನ್ನು ಸೇರಿಸಿದ್ದರು.

ಈ ಬಾರಿ ರವಿ ತಮಿಳಿನ ತಿರುಕ್ಕುರುಳ್ ಪದಗಳನ್ನು ಉಲ್ಲೇಖಿಸಿ ಮಾತು ಆರಂಭಿಸಿದರು. ವಿಧಾನಸಭಾಧ್ಯಕ್ಷ ಅಪ್ಪವು, ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಹಾಗೂ ಶಾಸಕರಿಗೆ ಅಭಿನಂದಿಸಿದರು. ಕೆಲವೇ ನಿಮಿಷಗಳಲ್ಲಿ ತಮ್ಮ ಮಾತುಗಳನ್ನು ಮುಗಿಸಿದರು.

ನಂತರ ವಿಧಾನಸಭಾಧ್ಯಕ್ಷರು ರಾಜ್ಯಪಾಲರ ಭಾಷಣವನ್ನು ಪೂರ್ಣವಾಗಿ ಓದಿದರು. ರಾಜ್ಯಪಾಲರು ಸರ್ಕಾರ ಸಿದ್ಧಪಡಿಸಿದ ಕರಡನ್ನು ಅನುಮೋದಿಸಿದ್ದಾರೆ, ಅವರು ಓದದೇ ಇದ್ದರೂ ಸಹ ಲೋಪವಾಗದು ಎಂದು ಅಪ್ಪವು ಹೇಳಿದರು.

ಇತ್ತೀಚೆಗೆ ಕೇರಳದ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಅವರೂ ಸಹ ಸಾಂಪ್ರದಾಯಿಕ ಭಾಷಣವನ್ನು ಕೆಲವೇ ನಿಮಿಷಗಳಲ್ಲಿ ಮುಗಿಸಿದ್ದರು. ಅವರು ಕೊನೆಯ ಪ್ಯಾರಾ ಮಾತ್ರ ಓದಿದ್ದರು.

# ಪಂಚಾಯಿತಿ ವ್ಯಾಪ್ತಿಯಲ್ಲಿ ಗ್ಯಾರಂಟಿ ಸಭೆ, ಕುಂದುಕೊರತೆಗಳ ನಿವಾರಣೆಗೆ ಕ್ರಮ : ಡಿಸಿ



ದಾವಣಗೆರೆ, ಫೆ.12 ಸರ್ಕಾ ರದ ಮಹತ್ವಾಕಾಂಕ್ಷೆ ಯೋಜನೆ ಗಳಾದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶ ವನ್ನು ಗ್ರಾಮ ಪಂಚಾಯಿತಿ ಮಟ್ಟ ದಲ್ಲಿ ಆಯೋಜನೆ ಮಾಡುವ ಮೂಲಕ ಫಲಾನುಭವಿಗಳ ಕುಂದು - ಕೊರತೆ ನಿವಾರಣೆಗೆ ಕ್ರಮ ವಹಿಸಬೇಕೆಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ತಿಳಿಸಿದರು.

ಸೋಮವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ಇಲಾಖೆ ಅಧಿಕಾರಿಗಳ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಈಗಾಗಲೇ ಸಂವಿಧಾನ ಜಾಗೃತಿ ಜಾಥಾ ಅಭಿಯಾನ ನಡೆಯುತ್ತಿದ್ದು ಜಾಥಾ ಸಂಚರಿಸುವ ಗ್ರಾಮ ಪಂಚಾಯಿತಿಗಳಲ್ಲಿಯೂ ಗ್ಯಾರಂಟಿ ಯೋಜನೆಗಳಾದ ಗೃಹಲಕ್ಷ್ಮಿ, ಗೃಹಜ್ಯೋತಿ, ಶಕ್ತಿ, ಅನ್ನಭಾಗ್ಯ ಹಾಗೂ ಯುವನಿಧಿ ಯೋಜನೆ ಕುರಿತು ಮಾಹಿತಿ ನೀಡಿ ಅವರ ಕುಂದು - ಕೊರತೆಗಳಿದ್ದಲ್ಲಿ ನಿವಾರಣೆಗೆ ಕ್ರಮ ವಹಿಸಬೇಕು ಎಂದರು.

ಯುವನಿಧಿಗೆ 4300 ನಿರುದ್ಯೋಗಿ ಪದವೀಧರರು ಹಾಗೂ ಡಿಪ್ಲೋಮಾ ಉತ್ತೀರ್ಣರಾದವರು ನೋಂದಾಯಿಸಿದ್ದು, ಇದಕ್ಕೆ ಇನ್ನಷ್ಟು ವೇಗ ಹೆಚ್ಚಿಸಲು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೋಂದಣಿಗೆ ಕ್ರಮ ವಹಿಸಲು ಸೂಚನೆ ನೀಡಿ ತಾಲ್ಲೂಕಿನ ಶಿಶು ಅಭಿವೃದ್ದಿ ಯೋಜನಾಧಿಕಾರಿ ಹಾಗೂ ಪಂಚಾಯಿತಿ ಅಭಿವೃದ್ದಿ ಅಧಿಕಾರಿಗಳು ಗ್ಯಾರಂಟಿ ಸಮಾವೇಶ ಮತ್ತು ಕುಂದುಕೊರತೆಗಳ ನಿವಾರಣೆಗೆ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು. ಈಗಾಗಲೇ ಜಿಲ್ಲಾ ಮಟ್ಟ ಹಾಗೂ ತಾಲ್ಲೂಕು ಮಟ್ಟದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯನ್ನು ರಚಿಸಲಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣನಾಯ್ಕ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# 1.2 ಕೋಟಿ ಕುಟುಂಬ ಬಡತನದಿದ ಮುಕ್ತಿ

**(1ನೇ ಪುಟದಿಂದ)** ಗೃಹಜ್ಯೋತಿ ಯೋಜನೆಯಡಿ 1.60 ಕೋಟಿ ಗ್ರಾಹಕರಿಗೆ ಪ್ರತಿ ತಿಂಗಳು 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡಲಾಗುತ್ತಿದೆ. ಗೃಹಲಕ್ಷ್ಮಿ ಯೋಜನೆಯಡಿ 1.17 ಕೋಟಿ ಮಹಿಳೆಯರಿಗೆ ಮಾಸಿಕ 2,000 ರೂ.ನಂತೆ ಅವರ ಖಾತೆಗಳಿಗೆ 11,037 ಕೋಟಿ ರೂ. ವರ್ಗಾಯಿಸಲಾಗಿದೆ.

ಗ್ಯಾರಂಟಿ ಯೋಜನೆಗಳಿಂದ ಜನರ ಕೈ ಸೇರಿದ ಹಣ ಆರ್ಥಿಕತೆಗೆ ಹೊಸ ಉತ್ತೇಜನ ನೀಡಿದೆ, ಒಂದೆಡೆ ರಾಜ್ಯಕ್ಕೆ ದೇಶೀಯ ಮತ್ತು ವಿದೇಶೀಯ ಹೂಡಿಕೆ ದೊಡ್ಡ ಪ್ರಮಾಣದಲ್ಲಿ ಹರಿದುಬರುತ್ತಿದೆ. ಜನರ ಕೊಳ್ಳುವ ಶಕ್ತಿ ಹೆಚ್ಚಾಗಿರುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹದಲ್ಲೂ ಹೆಚ್ಚಳವಾಗಿದೆ ಎಂದಿದ್ದಾರೆ.

# ರಾಷ್ಟ್ರೀಯ ಪಕ್ಷ ಸೇರಲು ರಾಜೇಶ್ ನಿರ್ಧಾರ



**(1ನೇ ಪುಟದಿಂದ)** ಮತಗಳ ಅಂತರದ ಸೋಲಬೇಕಾಯಿತು. ಈ ಸೋಲು ನನಗೆ ಸೋಲು ಎನಿಸಿಲ್ಲ. ಬದಲಾಗಿ ತೃಪ್ತಿ ಇದೆ ಎಂದರು. ಕಷ್ಟಕಾಲದಲ್ಲಿ ಕೈಹಿಡಿದ ಮತದಾರರಿಗೆ ಸದಾ ಚಿರ ಋಣಿ ಎಂದು ಭಾವುಕರಾದರು.

**ಎರಡೂ ರಾಷ್ಟ್ರೀಯ ಪಕ್ಷದ ವರಿಷ್ಠರು ಸಂಪರ್ಕದಲ್ಲಿದ್ದಾರೆ:** ಕಳೆದ ವಾರ ನಡೆಸಿದ ಪತ್ರಿಕಾ ಗೋಷ್ಠಿಯ ನಂತರ ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ರಾಷ್ಟ್ರೀಯ ಪಕ್ಷ ವರಿಷ್ಠರು ನನ್ನನ್ನು ಸಂಪರ್ಕಿಸಿ ಆಹ್ವಾನಿಸಿದ್ದಾರೆ. ಆದರೆ ನಾನು ಏಕಪಕ್ಷೀಯ ನಿರ್ಧಾರ ಕೈಗೊಳ್ಳದೆ, ಯಾವುದೇ ಆಮಿಷಕ್ಕೆ ಒಳಗಾಗದೆ ಸ್ವಾಭಿಮಾನಿ ಕಾರ್ಯಕರ್ತರ ಮಾರ್ಗದರ್ಶನ, ಅಭಿಪ್ರಾಯ ಪಡೆದು ಮುನ್ನಡೆಯುತ್ತೇನೆ. ಇಂದಿನ ಸಭೆಯ ಅಭಿಪ್ರಾಯ ಕ್ರೋಢೀಕರಿಸಿ ನಂತರ ಮತ್ತೊಂದು ಮಹತ್ವದ ಸಭೆ ನಡೆಸಿ, ಲೋಕಸಭಾ ಚುನಾವಣೆ ವೇಳೆಗೆ ಸೇರ್ಪಡೆಯಾಗುವ ಅಂತಿಮ ತೀರ್ಮಾನ ಕೈಗೊಳ್ಳೋಣ ಎಂದು ರಾಜೇಶ್ ಹೇಳಿದರು.

ನಾವು ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಕಾರ್ಡ್ ಗಳನ್ನು ಹಳ್ಳಿಗಳಲ್ಲಿ ಮನೆಮನೆಗೆ ಪ್ರಚಾರಪಡಿಸುವಾಗ ಹಾಲಿ ಶಾಸಕರು ಅವರು ಟಿಕೇಟ್ ಲಾಭಿಗಾಗಿ ಬೆಂಗಳೂರಿಗೆ ಪದೇ ಪದೇ ತೆರಳುತ್ತಿದ್ದರು. ಕಾಂಗ್ರೆಸ್ ಪಕ್ಷಕ್ಕೆ ಅವರ ಕೊಡುಗೆ ಏನಿದೆ? ಎಂದು ರಾಜೇಶ್ ಇದೇ ವೇಲೆ ಪ್ರಶ್ನಿಸಿದರು.

ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಗೆಲ್ಲುವ ಎಲ್ಲಾ ನಿರೀಕ್ಷೆಯಿತ್ತು. ಆಗ ಸ್ವಾಭಿಮಾನಿ ಪಕ್ಷದಿಂದ ನಾನು ಸ್ಪರ್ಧಿಸಿದ್ದರ ಪರಿಣಾಮ ಕಾಂಗ್ರೆಸ್ ಅಭ್ಯರ್ಥಿ ಗೆಲುವಿಗೆ ಕಾರಣವಾಯಿತು. ಅದನ್ನು ಮರೆತು ಶಾಸಕರು ತೆಂಗಿನಮರ ಗುರುತಿಗೆ ಮತ ಚಲಾಯಿಸಿದವರನ್ನು ತಾತ್ಸಾರ ಮಾಡುವುದು ಸರಿಯಲ್ಲ ಎಂದರು.

**ಬಿಜೆಪಿ ಪಕ್ಷ ಸೇರ್ಪಡೆಗೆ ವ್ಯಾಪಕ ಕೂಗು:** ಟಿಕೇಟ್ ತಪ್ಪಿಸಿದ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲು ಬಿಜೆಪಿ ಸೇರ್ಪಡೆಯಾಗಬೇಕು ಎಂಬ ಅಭಿಪ್ರಾಯಗಳು ಸಭೆಯಲ್ಲಿ ವ್ಯಾಪಕವಾಗಿ ವ್ಯಕ್ತವಾದವು. ಉಳಿದಂತೆ ಕೆಲ ಮುಖಂಡರುಗಳು ಯಾವುದೇ ಪಕ್ಷಕ್ಕೆ ಸೇರ್ಪಡೆ ಯಾದರೂ ತಮ್ಮ ನಿರ್ಧಾರಕ್ಕೆ ನಾವು ಬದ್ದರಾಗಿರುತ್ತೇವೆ. ಆದರೆ ತಮ್ಮ ಸ್ಥಾನ ಭದ್ರಪಡಿಸಿಕೊಂಡು ಸೇರ್ಪಡೆಗೊಳ್ಳಬೇಕು ಎಂದು ಸಲಹೆ ನೀಡಿದರು.

ಮುಖಂಡರಾದ ಯು.ಜಿ. ಶಿವಕುಮಾರ್, ಎನ್. ಎಸ್.ರಾಜಣ್ಣ, ಬೇವಿನಹಳ್ಳಿ ಯಶವಂತಗೌಡ , ಬಾಬುರೆಡ್ಡಿ, ಗಡಿಗುಡಾಳ್ ಸುರೇಶ್, ಮೊಬೈಲ್ ಮಂಜುನಾಥ್, ತಿಪ್ಪೇಸ್ವಾಮಿಗೌಡ, ಸಲಾಂ ಸಾಬ್, ಭೈರೇಶ್, ರಾಜಶೇಖರಗೌಡ, ಮಹಾಂತೇಶ್ ನಾಯ್ಕ, ತಳವಾರ ಮಂಜಣ್ಣ, ವಕೀಲ ಮರೇನಹಳ್ಳಿ ಬಸವರಾಜ್, ಕರಿಬಸಪ್ಪ, ನಾಗರಾಜ್, ಪುರುಷೋತ್ತಮನಾಯ್ಕ, ಹೇಮಣ್ಣ, ನಾಗರಾಜ್, ಸೂರಲಿಂಗಪ್ಪ, ಬಿ.ಲೋಕೇಶ್, ರೇವಣ್ಣ, ಶ್ರೀನಿವಾಸ್, ಗಿಡ್ಡಪ್ಪ, ತಿಪ್ಪೇಸ್ವಾಮಿ, ಬಸಣ್ಣ, ಓಬಳೇಶ್, ವೆಂಕಟೇಶ್, ದೇವರಾಜ್ ಮುಂತಾದವರು ಸಭೆಯಲ್ಲಿ ಭಾಗವಹಿಸಿದ್ದರು.

**ಸೈಟು ಮಾರಾಟಕ್ಕಿದೆ**
ಕುಂದುವಾಡದ ತುಂಗಭದ್ರಾ ಬಡಾವಣೆಯಲ್ಲಿ ಉತ್ತರ ಮುಖವುಳ್ಳ 20×30 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಆಸಕ್ತಿಯುಳ್ಳವರು ಮಾತ್ರ ಸಂಪರ್ಕಿಸಿ :
97416 84666, 82177 98233

**ಮನೆ ಬಾಡಿಗೆಗೆ ಇದೆ**
ಕೆ.ಬಿ. ಬಡಾವಣೆ 12ನೇ ಕ್ರಾಸ್‌ನಲ್ಲಿ ಡೋರ್ ನಂ. 832/1, ಕಾವೇರಮ್ಮ ಸ್ಕೂಲ್ ಹತ್ತಿರ, 2 ಬೆಡ್ ರೂಂ ಇರುವ ಉತ್ತರಕ್ಕೆ ಮುಖವಾಗಿರುವ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ಸಂಪರ್ಕಿಸಿ
93410 00864

**ತಕ್ಷಣ ಬೇಕಾಗಿದ್ದಾರೆ**
DTDC ಕೋರಿಯರ್ ಆಫೀಸ್‌ನಲ್ಲಿ Part time ಕೆಲಸ ಮಾಡಲು ಡ್ರೈವರ್ ಬೇಕಾಗಿದ್ದಾರೆ. ಮೊದಲು ಬಂದವರಿಗೆ ಆದ್ಯತೆ. ಸಮಯ : ರಾತ್ರಿ 7 ರಿಂದ ರಾತ್ರಿ 11ರವರೆಗೆ.
ಮೊ. 97385-23711

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಹೌಸಿಂಗ್ ಬೋರ್ಡ್ ತುಂಗಭದ್ರಾ ಬಡಾವಣೆ (ಕಮರ್ಷಿಯಲ್ ಸೈಟ್) 40X40 (55 ಲಕ್ಷಕ್ಕೆ) ಪಶ್ಚಿಮ, ದಕ್ಷಿಣ, ಕಾರ್ನರ್ ಡಬಲ್ ರೋಡ್‌ನ 60 ಅಡಿ ರಸ್ತೆಗೆ.
ಕಿರಣ್ ಬೂಸ್ನೂರ್ : 98440-63409
(ರಿಜಿಸ್ಟರ್ ಖರ್ಚು + ಕಮಿಷನ್ ಸೇರಿ)

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ. ರೋಡಿಗೆ ಹತ್ತಿರ ಶನೇಶ್ವರ ದೇವಸ್ಥಾನದ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40, 30x40 East, ಅಕ್ಕ-ಪಕ್ಕ, Rent - 2600/-
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಲೀಸ್‌ಗೆ ಇವೆ**
ವಿದ್ಯಾನಗರ, ತರಳಬಾಳು ಬಡಾವಣೆ, ಆಂಜನೇಯ ಬಡಾವಣೆಯಲ್ಲಿ 2 ಬೆಡ್ ರೂಮ್, 3 ಬೆಡ್ ರೂಮ್, ಮೊದಲನೇ ಮಹಡಿಯಲ್ಲಿ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ವಿನಾಯಕ ಬಡಾವಣೆಯಲ್ಲಿ 40x60 ಪೂರ್ವ, 40x60 ಉತ್ತರ, 40x50 ಪೂರ್ವ, ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ 40x60 ಪಶ್ಚಿಮ, ಸರಸ್ವತಿ ಬಡಾವಣೆಯಲ್ಲಿ 40x60 ಉತ್ತರ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಸ್ವೀಟ್ಸ್ ಅಂಗಡಿಯ ಕೌಂಟರ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ : 91138 57837

**ಬೇಕಾಗಿದ್ದಾರೆ**
ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ: ಪ್ರಕಾಶ ಟಿವಿ ಸೆಂಟರ್
ಕುರುಬರ ಹಾಸ್ಟೆಲ್ ಎದುರು, ಶ್ರೀಮುರುಘರಾಜೇಂದ್ರ ಕಾಂಪ್ಲೆಕ್ಸ್, ಹದಡಿ ರಸ್ತೆ, ದಾವಣಗೆರೆ.

**WANTED**
Freshers for Auditor Office (Gents Only)
77607 40760

**ಬೇಕಾಗಿದ್ದಾರೆ**
ದಾವಣಗೆರೆ ಹೆಸರಾಂತ ಜ್ಯೂಯಲರಿ ಶೋರೂಂನಲ್ಲಿ ಕೆಲಸ ಮಾಡಲು ಅನುಭವವುಳ್ಳ ಯುವಕ/ಯುವತಿಯರು ಬೇಕಾಗಿದ್ದಾರೆ. ಸಂಪರ್ಕಿಸಿ:
ರವಿ ಜ್ಯೂಯಲರ್ಸ್, ಮಂಡಿಪೇಟೆ, ದಾವಣಗೆರೆ
ಮೊ: 99649 32113

**ಬೇಕಾಗಿದ್ದಾರೆ**
ಮನೆಯಲ್ಲಿ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ, ಆಸಕ್ತರು ಸಂಪರ್ಕಿಸಿ, ಭೇಟಿಯ ಸಮಯ : ಬೆಳಿಗ್ಗೆ 11.30 ರಿಂದ ಸಂಜೆ 5 ರವರೆಗೆ. ಸಂಪರ್ಕಿಸಿ :
08192 254736

**HOUSES FOR RENT**
2BHK, 3BHK, Car Parking, 1st floor, Ground floor, Duplex, SS Layout, Siddaveerappa Layout, Saraswathi Layout.
77955 06795
Dakshith Iyanahalli

**ಬೇಕಾಗಿದ್ದಾರೆ**
ಬಿ.ಕಾಂ., ವಿದ್ಯಾರ್ಹತೆ ಹೊಂದಿರುವ ಮತ್ತು ಅಕೌಂಟೆಂಟ್‌ನಲ್ಲಿ ನುರಿತ ಅನುಭವವಿರುವ ಮಹಿಳಾ ಅಭ್ಯರ್ಥಿಗಳು ಕೆಲಸಕ್ಕೆ ಬೇಕಾಗಿದ್ದಾರೆ.
91486 86827

**HOUSES FOR RENT**
2 BHK independent car parking, Garden with attached Bathroom Shiva-Parvathi layout, Newly constructed. Only veg.
77955 06795
Dakshith Iyanahalli

**ಮಂಡಿಪೇಟೆಯಲ್ಲಿ ವಾಣಿಜ್ಯ ಕಟ್ಟಡ ಮಾರಾಟಕ್ಕಿದೆ**
ದಾವಣಗೆರೆ ಹೃದಯ ಭಾಗ ಮಂಡಿಪೇಟೆಯ ಮಲಬಾರ್ ಶೋರೂಂ ಎದುರು 15x120ಅಡಿ ಅಳತೆಯ ವಾಣಿಜ್ಯ ಉಪಯೋಗಿ ಕಟ್ಟಡ ಮಾರಾಟಕ್ಕಿದೆ. ಸಂಪರ್ಕಿಸಿ :
98809 33332

**ಬೇಕಾಗಿದ್ದಾರೆ**
ಟಾಟಾ ಏಸ್ ಓಡಿಸಬಲ್ಲ ಬ್ಯಾಡ್ಜ್ ವುಳ್ಳ ಡ್ರೈವರ್ -1, ಸೇಲ್ಸ್ ಮನ್-1, ಡಿಲೆವರಿ ಬಾಯ್ಸ್ -1 ಅನುಭವವುಳ್ಳವರು
ಸಂಪರ್ಕಿಸಿ : ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
94482 33326, 78991 35660

**REQUIRED**
Need Computer Operater for Cyber Shop, Near Ram and co. Circle. Contact :
70221 58935

**ಬೇಕಾಗಿದ್ದಾರೆ**
B.Com ಆಗಿರುವ ಅಕೌಂಟಿಂಗ್ ಮಾಡಲು ಅನುಭವವುಳ್ಳವರು ಹಾಗೂ ಡೆಲಿವರಿ ಕೆಲಸಕ್ಕೆ ಯುವಕರು ಬೇಕಾಗಿದ್ದಾರೆ. ಸಂಪರ್ಕಿಸಿ, ದಾವಣಗೆರೆ.
ಮೊ:74113 99485

**ಕಾರ್ ಬಾಡಿಗೆಗೆ**
ಸಂಪರ್ಕಿಸಿ :
86609 98651
97436 54365

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ, ದಂಪತಿ ಬೇಕಾಗಿದ್ದಾರೆ. ಸಂಬಳ 20,000/- ಊಟ+ವಸತಿ ಉಚಿತ.
97400 98047

**3 Years Lease 15 Lakh**
Hitech ಸಾಮಾನುಗಳನ್ನು ಬಳಸಿಕೊಂಡಿರುವಂತಹ ವಾಲ್ ರೂಫ್, ಇಟಾಲಿಯನ್ ಕಿಚನ್ ಉಳ್ಳ ಡಬಲ್ ಬೆಡ್ ರೂಮ್ ಮನೆ ಲೀಸ್‌ಗಿದೆ, 24 ಗಂಟೆ ನೀರಿನ ಸೌಲಭ್ಯವಿದೆ, ಎಸ್.ಎ. ರವೀಂದ್ರನಾಥ್ ಬಡಾವಣೆ ಜಿಲ್ಲಾ ಪಂಚಾಯಿತಿ ಹತ್ತಿರ, ಹೈಟೆಕ್ ಆಸ್ಪತ್ರೆ ಹತ್ತಿರ, ಲಲಿತ ಸ್ಕೂಲ್.
90364 66669

**ಮನೆ ಬಾಡಿಗೆಗೆ/ ಲೀಸ್‌ಗೆ ಇದೆ**
2 ಬೆಡ್ ರೂಮ್ , ಹಾಲ್, ಕಿಚನ್ ಉಳ್ಳ ಮನೆ 1ನೇ ಮಹಡಿನಲ್ಲಿ ಬಾಡಿಗೆ /ಲೀಸ್‌ಗೆ ಇದೆ ವಿಚಾರಿಸಿ. ವಿಳಾಸ : ಎಂ.ಸಿ.ಸಿ. 'ಎ' ಬ್ಲಾಕ್ ಪುರಂತರ ಆಸ್ಪತ್ರೆ ಹತ್ತಿರ.
88619 94260

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**STAFF NURSES VACANCY**
1) Senior nurses (GNM) - 3, OBG & Pead exp. 2) Junior nurses (GNM) 5 Freshers prefered 3) Reception / Lab Technician-2
Mathruchaaya Health Care
Shamanur road, Dvg.
78298 08443,97427 62462

**ಬೋರ್ ವೆಲ್ ಪಾಯಿಂಟ್**
ಆಧುನಿಕ ತಂತ್ರಜ್ಞಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು ಸಂಪರ್ಕಿಸಿ :
86609 98651
97436 54365

**PI ACADEMY**
Crash Courses : 2024-25
Class 10 CBSE / State
Maths & Science
28.03.2024 to 15.05.2024
Sri S. Nijalingappa Layout
99642 29344

**ಮನೆಗಳು ಲೀಸ್‌ಗಿವೆ**
2BHK, 3BHK ಇಂಡಿಪೆಂಡೆಂಟ್ ಹೌಸ್, 5ನೇ ಮೇನ್, 5ನೇ ಕ್ರಾಸ್, ಸೇಂಟ್ ಪಾಲ್ಸ್ ಕಾನ್ವೆಂಟ್ ರೋಡ್ ಪಿ.ಜೆ. ಬಡಾವಣೆ, ದಾವಣಗೆರೆ. ಸಂಪರ್ಕಿಸಿ :
88616 89590

**ಬೇಕಾಗಿದ್ದಾರೆ**
ಪೈಪ್ ಮತ್ತು ಸ್ಯಾನಿಟರಿ ಶೋರೂಂನಲ್ಲಿ Tally ಗೊತ್ತಿರುವ ಅಕೌಂಟೆಂಟ್ ಮಹಿಳೆ ಬೇಕಾಗಿದ್ದಾರೆ.
ಸಂಪರ್ಕಿಸಿ: ಮಾಗನೂರು ಎಂಟರ್ ಪ್ರೈಸಸ್
ರೆಡ್ಡಿ ಬಿಲ್ಡಿಂಗ್ ಹತ್ತಿರ, ಎಂ.ಸಿ.ಸಿ. 'ಎ' ಬ್ಲಾಕ್, ದಾವಣಗೆರೆ.
97436 36000, 8197696774

**PI ACADEMY**
Regular Course : 2024-25
Classes 8th, 9th & 10th Std
CBSE Maths & Science
Admission in Progress
Near by Laxmi Flour Mills
99642 29344

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಡಿಗ್ರಿ ಮುಗಿಸಿರುವ ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ : M/s ಬಸವಶ್ರೀ ಸೋಲಾರ್ ಟೆಕ್ನಾಲಜೀಸ್, ನಂ. 43ಹೆಚ್, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
ಮೊ.99001 42052
ಸಮಯ : 1 PM to 5 PM

**ಬೋರ್‌ವೆಲ್ ಪಾಯಿಂಟ್**
ಅಂತರ್ಜಲ ಸಂಶೋಧನೆ (Ground Water)
ಬೋರ್‌ವೆಲ್ ಪಾಯಿಂಟ್‌ಗಾಗಿ
ಸಂಪರ್ಕಿಸಿ
ಎಂ.ಟಿ. ಬಸವರಾಜು ಎಂ.ಎಸ್ಸಿ
ಭೂ ವಿಜ್ಞಾನಿಗಳು
94492 02888, 86608 03384

**ಹೆಸರು ಬದಲಾವಣೆ**
ದಾವಣಗೆರೆ ತಾಲ್ಲೂಕು ದಾವಣಗೆರೆ ಜಿಲ್ಲೆ, ಹೆಬ್ಬಾಳು ಬಡಾವಣೆ ಗ್ರಾಮದ ವಾಸಿ ದ್ವಾರಕೀಶ್ ಕೆ. ಯಾನೇ ಲೋಕೇಶನಾಯ್ಕ ಕೆ. ತಂದೆ ಕೃಷ್ಣನಾಯ್ಕ ಆದ ನಾನು ನನ್ನ ಹೆಸರು ವಿಜಯ ಬ್ಯಾಂಕ್ ಆನಗೋಡು ಇದ್ದ ಪಾಸ್ ಪುಸ್ತಕದಲ್ಲಿ ಲೋಕೇಶ್ ನಾಯ್ಕ ಕೆ. ಎಂದು ನಮೂದಾಗಿರುತ್ತದೆ. ಆದರೆ ನನ್ನ ಆಧಾರ್ ಕಾರ್ಡ್ ನಂ. 5095-9767-9057 ಇದರಲ್ಲಿ ನನ್ನ ಹೆಸರು ದ್ವಾರಕೇಶ್ ಕೆ. ಎಂದು ನಮೂದಾಗಿರುತ್ತದೆ. ದಿನಾಂಕ : 12.02.2024ರ ಸೋಮವಾರ ದಾವಣಗೆರೆ ನೋಟರಿಯವರ ಸಮ್ಮುಖದಲ್ಲಿ ದ್ವಾರಕೇಶ್ ಕೆ. ಎಂದು ಬದಲಾಯಿಸಿಕೊಂಡಿರುತ್ತೇನೆ. ಇನ್ನು ಮುಂದಿನ ಎಲ್ಲಾ ವ್ಯವಹಾರಗಳನ್ನು ದ್ವಾರಕೇಶ್ ಕೆ. ಹೆಸರಿನಲ್ಲಿ ಮಾಡುತ್ತೇನೆ. ದ್ವಾರಲೇಶ್ ಕೆ.

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಸೈಟು ಮಾರಾಟಕ್ಕಿದೆ**
ದಾವಣಗೆರೆ ರವೀಂದ್ರನಾಥ ಬಡಾವಣೆಯಲ್ಲಿ 50x60 North-East, Corner site ಮಾರಾಟಕ್ಕಿದೆ (Shashi detergent ಬಟ್ಟೆ ಸೋಪ್ ಫ್ಯಾಕ್ಟರಿ ಎದುರುಗಡೆ) ಸಂಪರ್ಕಿಸಿ :
90195 54141, 98454 17444

**Cook ಬೇಕಾಗಿದ್ದಾರೆ**
ಹೋಟೆಲ್ಸ್ - ಹಾಸ್ಟೆಲ್‌ನಲ್ಲಿ ಅಡುಗೆ ಮಾಡಲು COOKS ಬೇಕಾಗಿದ್ದಾರೆ. ಆಕರ್ಷಕ ಸಂಬಳ
+91- 81475 47421

**WANTED**
Sales Eecutives for FMCG-1
Dealers for Flair Packaged Drinking Water
Shamanur Pharma & Health Care Pvt. Ltd., 374, 4th main, P.J. Extn. Davangere.
98441 20003

**2 BHK ಮನೆ ಬಾಡಿಗೆಗೆ ಇದೆ**
2ನೇ ಮಹಡಿ, ಪಿ.ಜೆ. ಬಡಾವಣೆ, 2ನೇ ಮೇನ್, 1ನೇ ಕ್ರಾಸ್, ದಾವಣಗೆರೆ-2.
Only officials
97405 69252

**WANTED IMMEDIATELY**
Experienced NTC trained teachers for nursery and all subject teachers for primary, @ M. E.S Convent Anjeneya Badavane, 9th Cross Near indragiri chandragiri appartment Davangere -577004 Contact
98804 36414, 9880030171

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಸಾಯಿಬಾಬಾ ಬೋರ್‌ವೆಲ್**
ಮನೆ ಒಳಗೆ ಮತ್ತು ಹೊರಗೆ ಬೋರ್‌ವೆಲ್ ಕೊರೆಯುವುದು 41/2ಇಂಚು, 350 ರಿಂದ 400ರವರೆಗೆ ಬೋರ್ ಕೊರೆಯುವುದು.
99640 78484
95906 15776

**ನೇರ ಪರೀಕ್ಷೆ ಕಟ್ಟಲು/ರೆಗ್ಯುಲರ್ ಪ್ರವೇಶಕ್ಕಾಗಿ**
**SSLC ನೇರ ಪರೀಕ್ಷೆ**
IInd PUC/Senior Secondary, Arts/Commerce/Science B.Sc.-Agriculture, B.Tech All branches, D.Pharma, B.Ed., PhD regular B.A., B.com., B.Sc., M.A., M.Com., MBA, MLIB, Correspondence.
ಆಸಕ್ತರು ಫೋಟೋ-8, ಆಧಾರ್ ಕಾರ್ಡ್ ಹಾಗೂ ಮಾರ್ಕ್ಸ್ ಕಾರ್ಡ್‌ನೊಂದಿಗೆ ಸಂಪರ್ಕಿಸಿರಿ.
SS Global Institute for Higher Education
1982-1ನೇ ಮಹಡಿ, ಅನ್ವಯ ಆಯುರ್ವೇದಿಕ್ ಆಸ್ಪತ್ರೆ, ಶ್ರೀ ಸಾಯಿಬಾಬಾ ದೇವಸ್ಥಾನ ಹತ್ತಿರ, ಎಂಸಿಸಿ 'ಎ' ಬ್ಲಾಕ್, ದಾವಣಗೆರೆ-04.
72593 59861/99863 45266
ವಿ. ಸೂ: ಫೀಸನ್ನು ಕಂತಿನಲ್ಲಿ ಪಾವತಿಸಬಹುದು

**ಪ್ರವೇಶ ಪ್ರಕಟಣೆ**
II PUC, Scince, Arts, Commerce ಎಲ್ಲಾ ಸರ್ಕಾರಿ ನೌಕರಿ ಮತ್ತು ಮುಂಬಡ್ತಿ ಹಾಗೂ ಮುಂದಿನ ಎಲ್ಲಾ ವಿದ್ಯಾಭ್ಯಾಸಕ್ಕೂ ಬರುತ್ತದೆ.
93411 19195, 99800 32237

**CHANGE OF NAME**
I Vittal Narayan S. (Vittal narayan Suthrave) (Old Name) R/o #2043/15, Huchhangemma Nilaya, 3rd C Main, 2nd Cross, SS Layout, B Blcok, Davanagere Dist. Karanataka-577004. I have changed my name as Vittal N. (Vittal Narayan Rao) (New Name) vide Affidavit on 10.02.2024 sworn before Notary B.G Revanasiddappa, Davan. In future all my dealings & transactions will be in my new name. - Sd/- Vittal N

**AVOID MOSQUITOES**
Mosquito Net For Doors & Windows
SRI GOWRI ENTERPRISES
# 7C2, 4th Cross, Near Shaneshwara Temple, Karur Industrial Area, P.B. Road, Davangere-6
72049 94628

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಕೆಲಸಕ್ಕೆ ಬೇಕಾಗಿದ್ದಾರೆ**
**ಎಸ್.ಆರ್. ಕನ್‌ಸ್ಟ್ರಕ್ಷನ್ಸ್**
Tally ಬರುವ ಹಾಗೂ ಯಾವುದೇ ಡಿಗ್ರಿ ಆಗಿರುವ ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡಲು ಮತ್ತು ಕಂಪ್ಯೂಟರ್ ಜ್ಞಾನವಿರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಮಯ : ಬೆ.: 10 ರಿಂದ ಸಂ. : 6 ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
76769 99539

**ಆಸ್ತಿಯ ಕ್ರಯಪತ್ರ ದಾನ ಪತ್ರ ಕಳೆದಿದೆ**
ದೀಪಕ್ ಬಿ.ವಿ. ಬಿನ್ ಜಿ.ವಿ. ನಾಯ್ಕ್ ಹೆಸರಿನಲ್ಲಿರುವ ಎಂಸಿಸಿ ಬಿ ಬ್ಲಾಕ್, ದಾವಣಗೆರೆ. #2823/1,2,3, & 4 ಆಸ್ತಿಯ ಕ್ರಯಪತ್ರ, ದಾನಪತ್ರ ಹಾಗೂ ವಿಲ್ ಯಾನೆ ಮರಣ ಶಾಸನ ಪತ್ರವು ದಿ. : 28.7.2020ರಂದು ದಾವಣಗೆರೆ ಎಂಸಿಸಿ ಬಿ ಬ್ಲಾಕ್‌ನ ಡೆಂಟಲ್ ಕಾಲೇಜ್ ರಸ್ತೆಗೆ ಹೋಗುವಾಗ ಕಳೆದಿರುತ್ತದೆ. ಸಿಕ್ಕವರು ಈ ಕೆಳಗಿನ ಫೋನ್‌ಗೆ ತಿಳಿಸಲು ಕೋರಿದೆ.
ಫೋ. : 95381 54555

**ಸೈಟು ಮಾರಾಟಕ್ಕಿದೆ**
KHB ಲೇಔಟ್ ದಾವಣಗೆರೆಯಲ್ಲಿ 50×80 ಪಶ್ಚಿಮ ಸೈಟ್. ಓನರ್‌ಗೆ ಸಂಪರ್ಕಿಸಿ
63621 81509

**ಬೇಕಾಗಿದ್ದಾರೆ**
ಪದವಿ ಆಗಿರುವ ಕಂಪ್ಯೂಟರ್ ಆಪರೇಟರ್ ಕನ್ನಡ ಮತ್ತು ಇಂಗ್ಲಿಷ್ ಟೈಪಿಂಗ್ ಹಾಗೂ ಟ್ಯಾಲಿ ಗೊತ್ತಿರುವಂತಹ ಅಭ್ಯರ್ಥಿಗಳು ಈ ಕೂಡಲೇ ಸಂಪರ್ಕಿಸಿ.
ಎಂಇ ಎಸ್ ಸಮೂಹ ಶಿಕ್ಷಣ ಸಂಸ್ಥೆ
ಆಂಜನೇಯ ಬಡಾವಣೆ, ದಾವಣಗೆರೆ.
98804 36414, 98800 30171

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು, ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ.
85508 36642, 76191 70395

**ಸಂಜೀವಿನಿ ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರನ್ನು ನೋಡಿಕೊಳ್ಳಲು ಹೋಮ್ ನರ್ಸ್ (ಕೇರ್‌ಟೇಕರ್ಸ್) ಬೇಕಾಗಿದ್ದಲ್ಲಿ ಸಂಪರ್ಕಿಸಿ ಹಾಗೂ ವಯೋವೃದ್ಧರನ್ನು ನೋಡಿಕೊಳ್ಳಲು ಮಹಿಳೆಯರು ಮತ್ತು ಯುವತಿಯರು ಬೇಕಾಗಿದ್ದಾರೆ. ವಿದ್ಯಾರ್ಹತೆ 5th, 7th, 10th, PUC, GNM, ANM, ಉಚಿತ ಊಟ, ವಸತಿಯೊಂದಿಗೆ 15,000 ರಿಂದ 25,000 ರೂ.
ಫೋ. : 91486 83185

**FLAT FOR LEASE**
2 BHK, North facing 1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

# ಭಾರತೀಯ ಸಂಜ್ಞೆ ಭಾಷೆ ಕಲಿತರೆ ಎಲ್ಲರಿಗೂ ಅನುಕೂಲ



ದಾವಣಗೆರೆ, ಫೆ. 12- ಭಾರತೀಯ ಸಂಜ್ಞೆ ಭಾಷೆಯನ್ನು ಕೇವಲ ಶ್ರವಣ ದೋಷವಿರುವವರಷ್ಟೇ ಅಲ್ಲದೇ ಎಲ್ಲರೂ ಕಲಿತರೆ ಸಂವಹನ ನಡೆಸಲು ಅನುಕೂಲವಾಗುತ್ತದೆ ಎಂದು ಸಿ.ಆರ್.ಸಿ. ಕೇಂದ್ರದ ನಿರ್ದೇಶಕರಾದ ಮೀನಾಕ್ಷಿ ಹೇಳಿದರು.

ನಗರದ ದೇವರಾಜ ಅರಸು ಬಡಾವಣೆಯಲ್ಲಿ ಸಿಆರ್‌ಸಿ ಕೇಂದ್ರದ ವಿಕಲಚೇತನರ ಕೌಶಲ್ಯ ಭವನದಲ್ಲಿ ಜಿಲ್ಲಾಡಳಿತ, ಮಹಾನಗರ ಪಾಲಿಕೆ, ಜಿಲ್ಲಾ ಕಿವುಡರ ಸಂಘದ ಸಂಯುಕ್ತಾಶ್ರಯದಲ್ಲಿ ಮಹಾನಗರ ಪಾಲಿಕೆ ಮತ್ತು ವಿವಿಧ ಇಲಾಖೆ ಅಧಿಕಾರಿಗಳಿಗೆ, ವಿವಿಧ ಸಂಘ-ಸಂಸ್ಥೆಗಳ ಸದಸ್ಯರು, ಪೋಷಕರಿಗೆ ಹಮ್ಮಿಕೊಂಡಿದ್ದ 'ಭಾರತೀಯ ಸಂಜ್ಞೆ ಭಾಷೆ ತರಬೇತಿ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪೋಷಕರು ಮೊದಲು ಸಂಜ್ಞೆಭಾಷೆ ಕಲಿಯಬೇಕು. ಆಗ ಮಕ್ಕಳ ಭಾವನೆಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ. ಭಾರತದಲ್ಲಿ ಹಲವು ಭಾಷೆಗಳಿದ್ದರೂ ಸಂಜ್ಞೆ ಭಾಷೆ ಒಂದೇ ಆಗಿದೆ. ನಾನಾ ಭಾಷಿಕ ಪ್ರದೇಶದವರು ಒಂದೇ ಸಂಜ್ಞೆ ಬಳಸುತ್ತಿರುವುದರಿಂದ ವಿದೇಶಿಗರಿಗೂ ಸುಲಭವಾಗಿ ಅರ್ಥವಾಗುತ್ತದೆ ಎಂದರು. ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಅಧಿಕಾರಿ ಕೆ.ಕೆ. ಪ್ರಕಾಶ್, ಜಿಲ್ಲಾ ಕಿವುಡರ ಸಂಘದ ಅಧ್ಯಕ್ಷ ಎ. ಆಸೀಫ್, ಶಿಕ್ಷಣ ಇಲಾಖೆಯ ಯೋಗೇಶ್ವರ್, ಆರೋಗ್ಯ ಇಲಾಖೆ ಡಾ. ರೂಪ ಮತ್ತಿತರರು ಭಾಗವಹಿಸಿದ್ದರು.

# ಪೇಟಿಎಂ ವಿರುದ್ಧದ ಕ್ರಮ ಮರುಪರಿಶೀಲನೆ ಇಲ್ಲ

ನವದೆಹಲಿ, ಫೆ. 12 – ಪೇಟಿಎಂ ಪೇಮೆಂಟ್ಸ್ ಬ್ಯಾಂಕ್ (ಪಿ.ಪಿ.ಬಿ.ಎಲ್.) ವಿರುದ್ಧ ತೆಗೆದುಕೊಳ್ಳಲಾದ ಕ್ರಮವನ್ನು ಮರು ಪರಿಶೀಲಿಸುವುದಿಲ್ಲ. ಸಮಗ್ರ ಪರಿಶೀಲನೆಯ ನಂತರವೇ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ. ಪಿ.ಪಿ.ಬಿ.ಎಲ್. ಫೆಬ್ರವರಿ 29ರಿಂದ ಹಲವಾರು ಸೇವೆಗಳನ್ನು ನಿಲ್ಲಿಸಬೇಕು ಎಂದು ರಿಸರ್ವ್ ಬ್ಯಾಂಕ್ ಜನವರಿ 31ರಂದು ತಿಳಿಸಿತ್ತು. ಫಿನ್‌ಟೆಕ್ ವಲಯಕ್ಕೆ ರಿಸರ್ವ್ ಬ್ಯಾಂಕ್ ಬೆಂಬಲ ನೀಡಲಿದೆ. ಇದೇ ವೇಳೆ ಗ್ರಾಹಕರ ಹಿತ ರಕ್ಷಣೆ ಹಾಗೂ ಹಣಕಾಸು ಸ್ಥಿರತೆಗೂ ಬದ್ಧವಾಗಿರುವುದಾಗಿ ದಾಸ್ ತಿಳಿಸಿದ್ದಾರೆ.

# ಮಾರಿಕೊಪ್ಪ ಗ್ರಾಮದ ಶ್ರೀ ಹಳದಮ್ಮ ದೇವಿಗೆ 1 ಕೆಜಿ ಬೆಳ್ಳಿ ಮುಖ ಅರ್ಪಣೆ



ಹೊನ್ನಾಳಿ, ಫೆ.12- ತಾಲ್ಲೂಕಿನ ಮಾರಿಕೊಪ್ಪ ಗ್ರಾಮದ ಮುಜರಾಯಿ ಇಲಾಖೆಯ ಗ್ರೇಡ್ ಒಂದಕ್ಕೆ ಸೇರಿದ ಶ್ರೀ ಹಳದಮ್ಮ ದೇವಿಗೆ ಕೊಕ್ಕನೂರು ಹಾಲೇಶ್‌ನಾಯ್ಕ ಅವರು ಒಂದು ಕೆಜಿ ಬೆಳ್ಳಿ ಮುಖವನ್ನು ಕಡದಕಟ್ಟೆ ಶ್ರೀ ನೀಲಕಂಠ ಸ್ವಾಮೀಜಿ ನೇತೃತ್ವದಲ್ಲಿ ಸಮರ್ಪಿಸಿದರು. ಕೊಕ್ಕನೂರು ಗ್ರಾಮದ ರೈತ ಹಾಲೇಶ್‌ನಾಯ್ಕ ಮತ್ತು ಗಿರಿಜಾಬಾಯಿ ದಂಪತಿಗಳು ತಮ್ಮ ಭಕ್ತಿ ಸಮರ್ಪಿಸಿ, ವಿಶೇಷ ಪೂಜೆಯೊಂದಿಗೆ ಬೆಳ್ಳಿ ಮುಖವನ್ನು ದೇವಿಗೆ ಸಮರ್ಪಿಸಿದರು. ಈ ಸಂದರ್ಭದಲ್ಲಿ ಹಾಲೇಶ್‌ನಾಯ್ಕ್ ಬಂಧುಗಳಾದ ರಮೇಶ್, ಪಲ್ಲವಿ, ಜ್ಯೋತಿ, ಮಂಜುನಾಥ್, ಜಯಬಾಯಿ, ರಾಮಚಂದ್ರಪ್ಪ, ಸುಮ, ಮೋಹನ್, ಸೋಗಿಲು ಅಂಧುಮೋಹನ್, ಜೋಗಮ್ಮ, ಮಾರಿಕೊಪ್ಪ ಚಿನ್ನಪ್ಪ ಇದ್ದರು.

# ನಗರದಲ್ಲಿ ಇಂದು-ನಾಳೆ ಶ್ರೀ ಗುರು ಬಾಲ ಶನೇಶ್ವರಸ್ವಾಮಿ ದೇಗುಲದ ವಾರ್ಷಿಕೋತ್ಸವ

ಎತ್ತಿನ ಸಂತೆ ಹಿಂಭಾಗದ ಮಹಾಲಕ್ಷ್ಮೀ ಬಡಾವಣೆ ತಲ್ಲಿನ ಶ್ರೀ ಗುರು ಬಾಲ ಶನೇಶ್ವರಸ್ವಾಮಿ ಮಹಾಕ್ಷೇತ್ರದ ಎರಡನೇ ವಾರ್ಷಿಕೋತ್ಸವದ ಅಂಗವಾಗಿ ಇಂದು ಮತ್ತು ನಾಳೆ ವಿವಿಧ ಧಾರ್ಮಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 6.30 ಕ್ಕೆ ಕೆಂಡದಾರ್ಚನೆ, 7.30 ಕ್ಕೆ ಶ್ರೀ ವೀರಭದ್ರೇಶ್ವರ ಸ್ವಾಮಿ ಗುಗ್ಗಳ ಕಾರ್ಯಕ್ರಮ ಮೆರವಣಿಗೆಯೊಂದಿಗೆ ಜರುಗಲಿದೆ.

ನಾಳೆ ಬುಧವಾರ ಬೆಳಿಗ್ಗೆ 5 ಗಂಟೆಗೆ ಅಭಿಷೇಕ, ಮಧ್ಯಾಹ್ನ 12.30 ಕ್ಕೆ ಧಾರ್ಮಿಕ ಸಮಾರಂಭ ಏರ್ಪಡಿಸಲಾಗಿದೆ. ಸಂಜೆ 5.30 ಕ್ಕೆ ಶ್ರೀ ಗುರು ಬಾಲ ಶನೇಶ್ವರ ಸ್ವಾಮಿಯ ಉತ್ಸವವು ಜರುಗಲಿದೆ. ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

# ಬಸವಣ್ಣನವರ ವಚನಗಳ ಸಂದೇಶ ಸರ್ವ ಕಾಲಕ್ಕೂ ಪ್ರಸ್ತುತ



ದಾವಣಗೆರೆ, ಫೆ. 12- ಸಮಾಜದಲ್ಲಿನ ಅಸಮಾನತೆ, ಮೂಢನಂಬಿಕೆ, ಜಾತೀಯತೆ ತೊಡೆದು ಹಾಕುವ ನಿಟ್ಟಿನಲ್ಲಿ ಜನ ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಸಮಾಜ ಸುಧಾರಕ, ಮಹಾನ್ ಮಾನವತಾವಾದಿ ಬಸವಣ್ಣ ಅವರು ವಚನಗಳ ಮೂಲಕ ನೀಡಿದ ಸಂದೇಶಗಳು ಸರ್ವಕಾಲಕ್ಕೂ ಪ್ರಸ್ತುತ ಎಂದು ಮುಖ್ಯೋಪಾಧ್ಯಾಯ ದಾಗಿನಕಟ್ಟೆ ಪರಮೇಶ್ವರಪ್ಪ ಹೇಳಿದರು.

ನಗರದ ತರಳಬಾಳು ಬಡಾವಣೆಯ ಶ್ರೀ ಶಿವಕುಮಾರ ಸ್ವಾಮಿ ಮಹಾಮಂಟಪದಲ್ಲಿ ಶಿವಗೋಷ್ಠಿ ಸಮಿತಿ ಹಾಗೂ ಸಾದರ ನೌಕರರ ಬಳಗದ ಸಹಯೋಗದಲ್ಲಿ ಮೊನ್ನೆ ಏರ್ಪಾಡಾಗಿದ್ದ ಶಿವಗೋಷ್ಠಿ-302, ಸ್ಮರಣೆ -76 ಕಾರ್ಯಕ್ರಮದಲ್ಲಿ 'ಮಹಾಮಾನವತಾವಾದಿ ಬಸವಣ್ಣನವರು' ಕುರಿತು ಅವರು ಮಾತನಾಡಿದರು.

ಕರ್ನಾಟಕದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಒಂದು ವಿಶಿಷ್ಟವಾದ ಕಾಲಘಟ್ಟ, ಜಡ್ಡು ಹಿಡಿದಿದ್ದ ಸಮಾಜಕ್ಕೆ ವೈಚಾರಿಕತೆಯ ಸ್ಪರ್ಶ ನೀಡುವ ಮೂಲಕ ಸಮ ಸಮಾಜ ನಿರ್ಮಾಣದ ಆಶಯವನ್ನು ಹೊಂದಿದ್ದ ಶರಣರು, ಬಸವಣ್ಣನವರ ನೇತೃತ್ವದಲ್ಲಿ ನಡೆಸಿದ ಕ್ರಾಂತಿ ಅಪೂರ್ವವಾದುದು ಎಂದರು.

ಶತ ಶತಮಾನಗಳಿಂದಲೂ ಶೋಷಣೆಗೆ ಒಳಗಾಗಿದ್ದ ಸ್ತ್ರೀ ಕುಲಕ್ಕೆ ಧ್ವನಿಯಾದವರು ಬಸವಣ್ಣ. ಹೆಣ್ಣು ಮಾಯೆಯಲ್ಲ ಎಂದು ಪ್ರತಿಪಾದನೆ ಮಾಡುತ್ತಾ ಲಿಂಗಭೇದದ ವಿರುದ್ಧ ಸಿಡಿದೇಳುವ ಮೂಲಕ ಮಹಿಳಾ ಸ್ವಾತಂತ್ರ್ಯ ಪ್ರತಿಪಾದನೆ ಮಾಡಿದವರು ಬಸವಣ್ಣ ಎಂದು ಹೇಳಿದರು.

12ನೇ ಶತಮಾನದಲ್ಲಿಯೇ ಅನುಭವ ಮಂಟಪದಲ್ಲಿ 32 ವಚನಕಾರ್ತಿಯರಿಗೆ ಅವಕಾಶ ನೀಡುವ ಮೂಲಕ ಸಮಾನತೆ ಎತ್ತಿ ಹಿಡಿದವರು ಬಸವಣ್ಣ ಎಂದರು.

ವಚನ ಸಾಹಿತ್ಯ ಇಡೀ ವಿಶ್ವವನ್ನೇ ಭಾರತದತ್ತ ತಿರುಗಿ ನೋಡುವಂತೆ ಮಾಡಿದೆ. ಬಸವಣ್ಣ ಕೇವಲ ಭಾರತಕ್ಕೆ ಮಾತ್ರವಲ್ಲದೇ, ಜಗಜ್ಯೋತಿಯಾಗಿ ಇಡೀ ವಿಶ್ವಕ್ಕೆ ಗುರುವಾಗಿದ್ದವರು. ಬಸವ ತತ್ವವನ್ನು ವಿಶ್ವಕ್ಕೆ ಸಾರಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಾಗನೂರು ಪಬ್ಲಿಕ್ ಟ್ರಸ್ಟ್ ಗೌರವ ಕಾರ್ಯದರ್ಶಿ ಮಾಗನೂರು ಸಂಗಮೇಶ್ವರಗೌಡ್ರು ಮಾತನಾಡಿ, ಸಮಾಜದಲ್ಲಿ ಶರಣ ಧರ್ಮ-ವೈದಿಕಧರ್ಮ ಎಂದು ಗೊಂದಲಕ್ಕೆ ಒಳಗಾಗದೇ ಶರಣ ಧರ್ಮದ ತತ್ವಗಳನ್ನು ಕೇವಲ ಓದಿ, ಕೇಳಿದರೆ ಸಾಲದು, ಜೀವನದಲ್ಲಿ ಚಾಚೂ ತಪ್ಪದೇ ಪಾಲಿಸಿದಾಗ ಮಾತ್ರ ಸಾರ್ಥಕತೆ ಬರುತ್ತದೆ ಎಂದರು.

ವಚನ ಸಾಹಿತ್ಯವನ್ನು ಎಲ್ಲೆಡೆ ಪಸರಿಸುವ ಮಹತ್ಕಾರ್ಯದಲ್ಲಿ ಮಹಿಳೆ ಪ್ರಮುಖ ಪಾತ್ರ ವಹಿಸಿದಾಗ ಮಾತ್ರ ಯಶಸ್ವಿಯಾಗಲು ಸಾಧ್ಯವಿದೆ. ಮಕ್ಕಳಿಗೆ ವಿದ್ಯೆ ಜೊತೆಗೆ ಸಂಸ್ಕಾರ ಕಲಿಸುವಂತೆ ಕರೆ ನೀಡಿದರು.

ಲಿಂ. ಎಸ್‌ಎಂ. ಶಿವಾನಂದಯ್ಯ ಅವರ ಸ್ಮರಣೆಯನ್ನು ನಿವೃತ್ತ ಬ್ಯಾಂಕ್ ಅಧಿಕಾರಿ ಹೆಚ್.ಬಿ. ಜಯಪ್ಪ ಮಾಡಿದರು. ಡಾ. ಹೆಚ್.ಎನ್. ಮಲ್ಲಿಕಾರ್ಜುನಪ್ಪ ಮಾತನಾಡಿದರು. ಶ್ರೀಮತಿ ರತ್ನಮ್ಮ ದಿ. ಶಿವಾನಂದಯ್ಯ ಉಪಸ್ಥಿತರಿದ್ದರು. ಶಿವತಂಡದ ಕಲಾವಿದೆಯರು ವಚನ ಗಾಯನ ನಡೆಸಿಕೊಟ್ಟರು. ಶಿಕ್ಷಕಿ ಎಸ್.ಆರ್ . ಶಿಲ್ಪಾ ಸ್ವಾಗತಿಸಿದರು. ಎನ್. ದೀಪಕ್ ವಂದಿಸಿದರು.

# ಊಹಾತ್ಮಕ ದಾವೆಗಳಿಂದ ಹೆಚ್ಚುತ್ತಿರುವ ಹೊರೆ

## ವ್ಯವಸ್ಥೆ ಮೇಲಿನ ನಂಬಿಕೆ ಕುಂಠಿತವಾಗುವ ಅಪಾಯ: ನ್ಯಾ|| ಸಂತೋಷ್ ಹೆಗ್ಡೆ



ದಾವಣಗೆರೆ, ಫೆ. 12 - ತೀರ್ಪು ನಮ್ಮ ಪರವಾಗಿ ಬರುವ ಸಾಧ್ಯತೆ ಇರದಿದ್ದರೂ, ಊಹಾತ್ಮಕ ದಾವೆಗಳನ್ನು ದಾಖಲಿಸುವ ಪ್ರವೃತ್ತಿಯಿಂದಾಗಿ ನ್ಯಾಯಾಂಗದ ಉನ್ನತ ಹಂತದಲ್ಲಿ ಪ್ರಕರಣಗಳ ಹೊರೆ ಹೆಚ್ಚಾಗುತ್ತಿದೆ. ಇಂತಹ ಪ್ರವೃತ್ತಿಯಿಂದ ವ್ಯವಸ್ಥೆಯ ಮೇಲಿನ ನಂಬಿಕೆ ಕುಂಠಿತವಾಗುವ ಅಪಾಯವಿದೆ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ತಿಳಿಸಿದ್ದಾರೆ.

ನಗರದ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಇಂದು ಆಯೋಜಿಸಲಾಗಿದ್ದ ವೃತ್ತಿಪರ ಪುಷ್ಠೀಕರಣ ಕಾರ್ಯಕ್ರಮದಲ್ಲಿ 'ಸಾಮಾಜಿಕ ಮೌಲ್ಯಗಳ ಕುಸಿತ ಮತ್ತು ಪರಿಣಾಮಗಳು' ಎಂಬ ವಿಷಯ ಕುರಿತು ಅವರು ಮಾತನಾಡಿದರು.

ನನ್ನ ತಂದೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿದ್ದಾಗ, ಒಂಭತ್ತು ನ್ಯಾಯಮೂರ್ತಿಗಳಿದ್ದರು. ಈಗ ಸುಪ್ರೀಂ ಕೋರ್ಟ್‌ನಲ್ಲಿ 34 ನ್ಯಾಯಮೂರ್ತಿಗಳಿದ್ದಾರೆ. ಪ್ರಕರಣಗಳು ಹೆಚ್ಚಾಗಿರುವ ಕಾರಣ, ಇನ್ನೂ ಹತ್ತು ನ್ಯಾಯಮೂರ್ತಿಗಳ ಬೇಡಿಕೆ ಇದೆ. ಪ್ರಾಂತೀಯ ಸುಪ್ರೀಂ ಕೋರ್ಟ್ ಪೀಠಗಳ ಸ್ಥಾಪನೆಯ ಬೇಡಿಕೆಯೂ ಇದೆ ಎಂದವರು ಹೇಳಿದರು.

ಮೊದಲ ಹಂತದಲ್ಲೇ ತೀರ್ಪು ನಿಮ್ಮ ಪರವಾಗಿ ಬರದೇ ಇರುವಾಗ ಊಹಾತ್ಮಕವಾಗಿ ಮೇಲ್ಮನವಿ ದಾಖಲಿಸಿದಾಗ ಪ್ರಕರಣ ನಿಮ್ಮ ಪರವಾಗಿ ಆಗುತ್ತದೆಯೇ? ಎಂದವರು ಪ್ರಶ್ನಿಸಿದರು.

ಊಹಾತ್ಮಕ ಆಧಾರದ ಮೇಲೆ ಮೇಲ್ಮನವಿ, ಎರಡನೇ ಮೇಲ್ಮನವಿ, ಮರು ಪರಿಶೀಲನೆ ಅರ್ಜಿಗಳನ್ನು ಸಲ್ಲಿಸಲಾಗುತ್ತಿದೆ. ಇದರಿಂದಾಗಿ, ಹಲವು ಜನರು ಸಮಸ್ಯೆಗಳನ್ನು ಇತ್ಯರ್ಥಪಡಿಸಿಕೊಳ್ಳಲು ಭೂಗತರ ಮೊರೆ ಹೋಗುವುದೂ ನಡೆದಿದೆ. ಇಂತಹ ಪ್ರವೃತ್ತಿ ಹೆಚ್ಚಿದರೆ ವ್ಯವಸ್ಥೆಯ ಮೇಲೆ ಪರಿಣಾಮವಾಗುತ್ತದೆ ಎಂದು ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಎಚ್ಚರಿಸಿದರು.

ಅಮೆರಿಕದಲ್ಲಿ ಸುಪ್ರೀಂ ಕೋರ್ಟ್ ಕೇವಲ ಸಂವಿಧಾನಕ್ಕೆ ಸಂಬಂಧಿಸಿದ ವಿಷಯಗಳ ವಿಚಾರಣೆ ನಡೆಸುತ್ತದೆ. ಹೀಗಾಗಿ ಅಲ್ಲಿನ ಸುಪ್ರೀಂ ಕೋರ್ಟ್ ಮೇಲೆ ಪ್ರಕರಣಗಳ ಒತ್ತಡವಿಲ್ಲ. ವರ್ಷದಲ್ಲಿ ಕೇವಲ ಆರು ತಿಂಗಳು ಮಾತ್ರ ಅಲ್ಲಿನ ಸುಪ್ರೀಂ ಕೋರ್ಟ್ ಕಾರ್ಯನಿರ್ವಹಿಸುತ್ತಿದೆ ಎಂದು ಹೆಗ್ಡೆ ತಿಳಿಸಿದರು. ತೃಪ್ತಿ ಹಾಗೂ ಮಾನವೀಯತೆಯ ಕೊರತೆಯಿಂದಾಗಿ ಈ ಸಮಾಜದಲ್ಲಿ ಭ್ರಷ್ಟಾಚಾರ ಹೆಚ್ಚಾಗುತ್ತಿದೆ. ವಾಮ ಮಾರ್ಗ ಹಿಡಿದವರ ಆದಾಯ ಹೆಚ್ಚಿದಷ್ಟೂ, ಸರಿಯಾದ ದಾರಿಯಲ್ಲಿ ಸಾಗುತ್ತಿರುವವರ ಆದಾಯ ಕಡಿಮೆಯಾಗುತ್ತದೆ. ಈ ಬಗ್ಗೆ ಎಲ್ಲರೂ ಎಚ್ಚರಿಕೆ ವಹಿಸಬೇಕಿದೆ ಎಂದರು.

ವೇದಿಕೆಯ ಮೇಲೆ ಬಾಪೂಜಿ ವಿದ್ಯಾಸಂಸ್ಥೆಯ ಆಡಳಿತ ಮತ್ತು ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಹಾಗೂ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್.ಹೆಚ್. ಅರುಣ್ ಕುಮಾರ್ ಉಪಸ್ಥಿತರಿದ್ದರು.

ಆರ್.ಎಲ್. ಕಾನೂನು ಕಾಲೇಜಿನ ಪ್ರಾಂಶುಪಾಲ ಜಿ.ಎಸ್. ಯತೀಶ್ ಅಧ್ಯಕ್ಷತೆ ವಹಿಸಿದ್ದರು.

### ವಿಪಕ್ಷಗಳ ಮೇಲಿನ ದಾಳಿ ತಪ್ಪಾದರೂ ತೃಪ್ತಿ!

ಪ್ರತಿಪಕ್ಷಗಳವರು ನಮ್ಮ ಮೇಲೆ ಮಾತ್ರ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ದಾಳಿ ನಡೆಸುತ್ತಿವೆ ಎಂದು ಆರೋಪಿಸಲಾಗುತ್ತಿದೆ. ಇದು ಒಂದು ರೀತಿಯಲ್ಲಿ ತಪ್ಪು. ಆದರೂ, ಇಂತಹ ದಾಳಿಗಳ ಬಗ್ಗೆ ಒಂದು ರೀತಿ ತೃಪ್ತಿ ಇದೆ ಎಂದು ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಹೇಳಿದರು.

ಏಕೆಂದರೆ, ಈ ಪಕ್ಷದವರು ಅಧಿಕಾರಕ್ಕೆ ಬಂದ ಮೇಲೆ ಆ ಪಕ್ಷದವರ ಮೇಲೆ ದಾಳಿ ಮಾಡುತ್ತಾರೆ! ಹೀಗಾಗಿ ಮೊದಲು ಇವರ ಮೇಲಿನ ದಾಳಿ ಮುಗಿಸಿ ಬಿಡಿ. ಅಷ್ಟಾದರೂ ಆಗುತ್ತದೆ ಎಂದವರು ಹೇಳಿದರು.

# ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಇಂದಿನಿಂದ ವಾರ್ಷಿಕೋತ್ಸವ, ರಥೋತ್ಸವ



ದೇವರಾಜ ಅರಸು ಬಡಾವಣೆಯಲ್ಲಿ ರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದ 26 ನೇ ವಾರ್ಷಿಕೋತ್ಸವ ಹಾಗೂ ರಥೋತ್ಸವ ಕಾರ್ಯಕ್ರಮ ಇಂದಿನಿಂದ ಇದೇ ದಿನಾಂಕ 16 ರವರೆಗೆ ಹಮ್ಮಿಕೊಳ್ಳಲಾಗಿದೆ

ಇಂದು ಬೆಳಿಗ್ಗೆ 7.30 ರಿಂದ ದೇವಿಗೆ ಪಂಚಾಮೃತ ಅಭಿಷೇಕ, ಅಲಂಕಾರ, ವಿಶೇಷವಾಗಿ ಸಹಸ್ರ ನಾಮಾವಳಿ, ಪುಷ್ಪಾರ್ಚನೆ, ಕುಂಕುಮಾರ್ಚನೆ, ಮಂತ್ರ ಪುಷ್ಪ ಹಾಗೂ ಶ್ರೀ ದುರ್ಗಾ ಹೋಮ, ಅನ್ನ ಸಂತರ್ಪಣೆ ನೆರವೇರಲಿದೆ. ಸಂಜೆ 5 ಕ್ಕೆ ಶ್ರೀ ಲಲಿತ ಸಹಸ್ರ ನಾಮಾವಳಿಯೊಂದಿಗೆ ಕುಂಕುಮಾರ್ಚನೆ, ಭಜನಾ ಕಾರ್ಯಕ್ರಮ ನಡೆಯಲಿದೆ. ನಾಳೆ ಬುಧವಾರ ಬೆಳಿಗ್ಗೆ 8 ಗಂಟೆಯಿಂದ ಅಭಿಷೇಕ, ಕಳಸ ಸ್ಥಾಪನೆ, ನವಗ್ರಹ ಹೋಮ, ಪೂರ್ಣಾಹುತಿ, ಮಹಾ ಮಂಗಳಾರತಿ, ಮಂತ್ರಪುಷ್ಪ, ಅಷ್ಟಾವಧಾನ ಸೇವೆ, ತೀರ್ಥಪ್ರಸಾದ ವಿನಿಯೋಗವಿದೆ. ಸಂಜೆ 7 ಗಂಟೆಗೆ 'ಶಿವ ದಾಕ್ಷಾಯಿಣಿ ನೃತ್ಯ ವೈಭವ' ರೂಪಕವನ್ನು ತಪಸ್ಯ ವಾಸವಿ ಸಂಸ್ಥೆಯ ಮಕ್ಕಳು ಪ್ರದರ್ಶಿಸಲಿದ್ದಾರೆ.

ದಿನಾಂಕ 15 ರ ಗುರುವಾರ ಬೆಳಿಗ್ಗೆ 8 ಗಂಟೆಗೆ ಪಂಚಾಮೃತ ಅಭಿಷೇಕ, ಮಂಡಲ ಆರಾಧನೆ, ರುದ್ರಹೋಮ, ವಿವಿಧ ಪೂಜಾ ಕಾರ್ಯಕ್ರಮಗಳು ಜರುಗಲಿವೆ. ಸಂಜೆ 5 ಕ್ಕೆ ಶ್ರೀ ಗಿರಿಜಾ ಶಂಕರ ಕಲ್ಯಾಣ ಹಮ್ಮಿಕೊಳ್ಳಲಾಗಿದ್ದು, ಬೆಂಗಳೂರಿನ ಪುರೋಹಿತರಾದ ಜಿ. ಪ್ರವೀಣ್ ಅವರಿಂದ ನಡೆಯಲಿದೆ. ಇದಲ್ಲದೇ ಪ್ರತಿ ಶನಿವಾರ ಸಂಜೆ 6.30 ಕ್ಕೆ ದೇವಸ್ಥಾನದಲ್ಲಿ ಹನುಮಾನ್ ಚಾಲಿಸ್ ಪಠಣ ನಡೆಯಲಿದೆ.

# ಕಿರಣ್‌ಗೆ ಸೈಕ್ಲಿಂಗ್‌ನಲ್ಲಿ ಚಾಂಪಿಯನ್‌ಶಿಪ್



ದಾವಣಗೆರೆ, ಫೆ. 12- ನಗರದ ಸ್ವಾತಂತ್ರ್ಯ ಹೋರಾಟಗಾರರಾದ ದಿ. ಬಾಳೆಹೊಲದ ಮರಳುಸಿದ್ದಪ್ಪನವರ ಪುತ್ರ ಕಿರಣ್ ಬಾಳೇ ಹೊಲದ ಅವರು ಟೂರ್ಡಿ ಹಂಡ್ರೆಡ್ ಎಂಬ ಸೈಕಲ್ ಸ್ಪರ್ಧೆಯಲ್ಲಿ ಭಾಗವಹಿಸಿ ನೂರು ದಿನದ ಸೈಕಲ್ ಚಾಲೆಂಜ್‌ನಲ್ಲಿ ಒಟ್ಟು 6,654 ಕಿ.ಮೀ. ದೂರವನ್ನು ಕ್ರಮಿಸಿ 40 ರಿಂದ 49 ವಯಸ್ಸಿನ ವಿಭಾಗದಲ್ಲಿ ಚಾಂಪಿಯನ್ ಆಫ್ ಚಾಂಪಿಯನ್ ಪಟ್ಟವನ್ನು ಪಡೆದಿರುತ್ತಾರೆ.

ಮೂಲತಃ ವ್ಯವಹಾರ ಹಾಗೂ ಸಂಘ-ಸಂಸ್ಥೆಗಳು ಮತ್ತು ಸಾಮಾಜಿಕ ಸೇವೆ ಯಲ್ಲಿ ತೊಡಗಿಸಿಕೊಂಡು, ತಮ್ಮ ಒತ್ತಡದ ಜೀವನದಲ್ಲಿಯೂ ಸಹ 100 ದಿನದ ಸೈಕಲ್ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದಿದ್ದಾರೆ.

ಐದನೇ ಹಂತದ ಚಾಲೆಂಜ್‌ನಲ್ಲಿ ಒಟ್ಟು 3354 ಕಿಲೋಮೀಟರ್ ಕ್ರಮಿಸುವ ಮೂಲಕ ದಾಖಲೆ ಮಾಡಿದ್ದಾರೆ. ಇವರ ಈ ಸಾಧನೆಗೆ ಬೈಸಿಕಲ್ ಕ್ಲಬ್ಬಿನ ಅಧ್ಯಕ್ಷರು ಕಾರ್ಯದರ್ಶಿಗಳು ಮತ್ತು ಖಜಾಂಚಿಗಳು ಹಾಗೂ ಸರ್ವ ಸದಸ್ಯರು ಅಭಿನಂದಿಸಿ, ಇವರನ್ನು ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಸನ್ಮಾನಿಸಿ, ಪ್ರಶಸ್ತಿ ಪತ್ರ ಹಾಗೂ ಪದಕಗಳನ್ನು ವಿತರಿಸಿದ್ದಾರೆ.

ಕಿರಣ್, ಇತ್ತೀಚಿನ ದಿನದಲ್ಲಿ ನಗರದಿಂದ ಅಂಜನಾದ್ರಿ ಬೆಟ್ಟಕ್ಕೆ ಸೈಕಲ್‌ನಲ್ಲಿ ಪ್ರಯಾಣ ಮಾಡಿ ಹತ್ತು ತಾಸಿನಲ್ಲಿ ಅಂಜನಾದ್ರಿ ಬೆಟ್ಟವನ್ನು ತಲುಪಿದ್ದಾರೆ.

# ಹೊರಗುತ್ತಿಗೆ ನೌಕರರ ಪ್ರತಿಭಟನೆ

ದಾವಣಗೆರೆ, ಫೆ.12- ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ನಾಳೆ ದಿನಾಂಕ 13 ಮತ್ತು 14 ರಂದು ಪಾಲಿಕೆ ಮುಂಭಾಗದಲ್ಲಿ ಪ್ರತಿಭಟನೆ ನಡೆಸಲಿದ್ದು, ದಿನಾಂಕ 15ರಂದು 'ಹೊರಗುತ್ತಿಗೆ ನೌಕರರ ನಡಿಗೆ ಮುಖ್ಯಮಂತ್ರಿಗಳ ಮನೆ ಕಡೆಗೆ' ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪಾಲಿಕೆ ಹೊರಗುತ್ತಿಗೆ ಘನತ್ಯಾಜ್ಯ ವಿಲೇವಾರಿ ವಾಹನ ಚಾಲಕರ ಸಂಘದ ಅಧ್ಯಕ್ಷ ಎಂ.ಆರ್. ದುಗ್ಗೇಶ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಬಿ. ಸಂತೋಷ್, ಹೆಚ್.ಎಂ. ಕೊಟ್ರೇಶ್, ಜಿ.ಹೆಚ್. ಚಂದ್ರಪ್ಪ, ಎಂ. ರಮೇಶ್, ಮೈಲಾರಪ್ಪ, ಎನ್. ದ್ಯಾಮಣ್ಣ ಹಾಗೂ ನವೀನ್ ಕುಮಾರ್ ಉಪಸ್ಥಿತರಿದ್ದರು.

# 26ರಂದು ಬೃಹತ್ ಉದ್ಯೋಗ ಮೇಳ

ದಾವಣಗೆರೆ, ಫೆ. 12- ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದಿಂದ ಇದೇ ದಿನಾಂಕ 26 ಮತ್ತು 27 ರಂದು ಬೆಂಗಳೂರಿನ ರಾಜ್ಯಮಟ್ಟದ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ. ಉದ್ಯೋಗಾಕಾಂಕ್ಷಿಗಳಿಗೆ ವಿದ್ಯಾರ್ಹತೆಗೆ ಅನುಗುಣವಾಗಿ ಉದ್ಯೋಗಾವಕಾಶವನ್ನು ಒದಗಿಸುವ ಸಂಬಂಧ ಈ ಮೇಳವನ್ನು ಆಯೋಜಿಸಲಾಗಿದೆ. ನೋಂದಣಿಯಾಗಲು ವೆಬ್‌ಸೈಟ್; https;// skillconnect.kaushalkar.com ಮೂಲಕ ನೋಂದಾಯಿಸಲು ಜಿಲ್ಲಾಧಿಕಾರಿ ಡಾ.ವೆಂಕಟೇಶ್. ಎಂ.ವಿ ತಿಳಿಸಿದ್ದಾರೆ.

# ರಾಜ್ಯ ಮಟ್ಟದ ವಧು-ವರರ ಸಮಾವೇಶ



ದಾವಣಗೆರೆ, ಫೆ.12- ನಗರದ ಮೋತಿ ಚನ್ನಬಸಮ್ಮ ವೀರಪ್ಪ ಕಲ್ಯಾಣ ಮಂಟಪದಲ್ಲಿ ಅಕ್ಕಮಹಾದೇವಿ ವಧು- ವರಾನ್ವೇಷಣಾ ಕೇಂದ್ರದಿಂದ ರಾಜ್ಯ ಮಟ್ಟದ ಸಮಾವೇಶ ಏರ್ಪಡಿಸಲಾಗಿತ್ತು. ರಾಜ್ಯದ ವಿವಿಧೆಡೆಯಿಂದ ಪೋಷಕರು ವಧು-ವರರ ಜೊತೆಗೆ ಆಗಮಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿ ದ್ದರು. ಮಲ್ಲಮ್ಮ ಬಾಬೆ ಬಡಾವಣೆಯ ಪೊಲೀಸ್ ಇನ್‌ಸ್ಪೆಕ್ಟರ್ ಕಾರ್ಯಕ್ರಮ ಉದ್ಘಾಟಿಸಿದರು.

ವಿಮಾ ವೀರಭದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಅಕ್ಕಮಹಾದೇವಿ ಸಮಾಜದ ಅಧ್ಯಕ್ಷರಾದ ಕೆ. ಕೆ. ಸುಶೀಲಮ್ಮ, ಉಪಾ ಧ್ಯಕ್ಷರಾದ ನೀಲಗುಂದ ಜಯಮ್ಮ, ವಧು-ವರರ ಕೇಂದ್ರದ ಕಾರ್ಯ ದರ್ಶಿ ಶಾಂತಕುಮಾರ, ಸಹಕಾರ್ಯದರ್ಶಿ ಮಾಗಾನಹಳ್ಳಿ ರತ್ನಮ್ಮ ಉಪಸ್ಥಿತರಿದ್ದರು.


## ಸಾರ್ವಜನಿಕ ಪ್ರಕಟಣೆ

ದಾವಣಗೆರೆ ಸಿಟಿ, ಎಸ್.ಎಸ್. ಬಡಾವಣೆ, 4ನೇ ಕ್ರಾಸ್, 4ನೇ ಮೇನ್, ಡೋರ್ ನಂ. 4706 ರಲ್ಲಿ ವಾಸವಾಗಿರುವ ಕೊಂಡಾರೆಡ್ಡಿ ಬಿನ್ ವೆಂಗಲರೆಡ್ಡಿ, 75 ವರ್ಷ, ಆದ ನಾನು ಈ ಮೂಲಕ ತಿಳಿಸುವುದೇನೆಂದರೆ,

ಈ ಕೆಳಕಂಡ ಷೆಡ್ಯೂಲ್ ಸ್ವತ್ತಿಗೆ ನಾನೇ ಸಂಪೂರ್ಣ ಮಾಲೀಕನಾಗಿದ್ದು, ಷೆಡ್ಯೂಲ್ ಸ್ವತ್ತನ್ನು ಈ ಹಿಂದೆ ದಿನಾಂಕ: 13-09-1996 ರಂದು ಅದರ ಹಿಂದಿನ ಮಾಲೀಕರಾದ ಶ್ರೀ ಖಾದರ್ ಬಾಷ ಇವರಿಂದ ಶುದ್ಧ ಕ್ರಯಕ್ಕೆ ಖರೀದಿಸಿ, ಸದರಿ ಸ್ವತ್ತಿನಲ್ಲಿ ಮನೆ ಕಟ್ಟಿಕೊಂಡಿರುತ್ತೇನೆ. ಸದರಿ ಸ್ವತ್ತಿನ ಮೂಲ ಕ್ರಯ ಪತ್ರ ನಂ. 4719/1996-97 ಹಾಗೂ ಅದರ ಹಿಂದಿನ ಕ್ರಯ ಪತ್ರ ದಿನಾಂಕ : 21-11-1984 ಎರಡೂ ಮೂಲ ಪತ್ರಗಳು ನಾನು ಮನೆ ಶಿಫ್ಟ್ ಮಾಡುವ ವೇಳೆ ಕಳೆದು ಹೋಗಿರುತ್ತವೆ. ಈ ಎರಡೂ ಮೂಲ ಕ್ರಯ ಪತ್ರಗಳು ಯಾರಿಗಾದರೂ ಎಲ್ಲಾದರೂ ಸಿಕ್ಕಲ್ಲಿ ಈ ಕೆಳಕಂಡ ವಿಳಾಸಕ್ಕೆ ತಲುಪಿಸಲು ಕೋರಲಾಗಿದೆ.

ಷೆಡ್ಯೂಲ್ : ದಾವಣಗೆರೆ ಸಬ್ ರಿಜಿಸ್ಟ್ರಾರ್ ಕಛೇರಿ ಅಧಿಕಾರಕ್ಕೆ ಒಳಪಟ್ಟ, ನಿಟ್ಟುವಳ್ಳಿ ಡಿವಿಜನ್‌ನಲ್ಲಿ ಬರತಕ್ಕ, ಡೋರ್ ನಂ. 1674/27, ಇ-ಸ್ವತ್ತು ನಂ. 5827826507 ಸ್ವತ್ತಿನಲ್ಲಿ ನಿರ್ಮಿಸಿರುವ ನೆಲಮಹಡಿ, ಮೊದಲನೇ ಮಹಡಿ ಮತ್ತು 2ನೇ ಮಹಡಿಯ ವಾಸದ ಮನೆ ಇದರ ಅಳತೆ ಪೂರ್ವ-ಪಶ್ಚಿಮ 9.753620 × ಉತ್ತರ-ದಕ್ಷಿಣ 8.229616 ಮೀಟರ್, (32×27 ಅಡಿ) ಸದರಿ ಸದರಿ ಸ್ವತ್ತಿಗೆ ಚಕ್ಕುಬಂದಿ :- ಪೂರ್ವಕ್ಕೆ : ನಿವೇಶನ ನಂ.2, ಪಶ್ಚಿಮಕ್ಕೆ : ಪ್ಯಾಸೇಜ್, ಉತ್ತರಕ್ಕೆ : ನಿವೇಶನ ನಂ. 3, ದಕ್ಷಿಣಕ್ಕೆ : ಸರ್ವೇ ನಂಬರಿನ ಸ್ವತ್ತು.

ವಿಳಾಸ : ಕೆ.ಕೊಂಡಾರೆಡ್ಡಿ ಬಿನ್ ವೆಂಗಲ ರೆಡ್ಡಿ, ಎಸ್.ಎಸ್. ಬಡಾವಣೆ, 4ನೇ ಕ್ರಾಸ್, 4ನೇ ಮೇನ್, ಡೋರ್ ನಂ. 4706, ದಾವಣಗೆರೆ.

ಇಂತಿ ತಮ್ಮ ವಿಶ್ವಾಸಿ,
ಕೆ.ಕೊಂಡಾರೆಡ್ಡಿ


# ಎಸ್.ಎಸ್. ಆಸ್ಪತ್ರೆಯ ಡಯಾಗ್ನೋಸ್ಟಿಕ್ ಲ್ಯಾಬೋರೇಟರಿಗೆ ಎನ್‌ಎಬಿಎಲ್ ಮಾನ್ಯತೆ



ದಾವಣಗೆರೆ, ಫೆ. 12- ನಗರದ ಬಾಪೂಜಿ ವಿದ್ಯಾಸಂಸ್ಥೆಯ ಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಮತ್ತು ಆಸ್ಪತ್ರೆಯ ರೋಗ ನಿರ್ಣಯ ಲ್ಯಾಬೋರೇಟರಿ (ಡಯಾಗ್ನೋಸ್ಟಿಕ್ ಲ್ಯಾಬೋರೇಟರಿ) ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ ಹಾಗೂ ಎನ್‌ಎಬಿಎಲ್ (ಪರೀಕ್ಷೆ ಮತ್ತು ಮಾಪನಾಂಕ ನಿರ್ಣಯ ಪ್ರಯೋಗಾಲಯಗಳಿಗಾಗಿ ರಾಷ್ಟ್ರೀಯ ಮಾನ್ಯತೆ ಮಂಡಳಿ) ನಿಂದ ಮಾನ್ಯತೆ ಪಡೆದಿದೆ.

ಸಂಸ್ಥೆಯ ಪ್ರಮುಖ ಪೋಷಕ ಶಾಮನೂರು ಶಿವಶಂಕರಪ್ಪ ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಜಂಟಿ ಕಾರ್ಯದರ್ಶಿಯೂ ಆದ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ನೇತೃತ್ವದಲ್ಲಿ ಗುಣಮಟ್ಟದ ಶಿಕ್ಷಣ ಹಾಗೂ ಚಿಕಿತ್ಸೆಗೆ ಹೆಸರುವಾಸಿ ಆಗಿರುವ ಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಮತ್ತು ಆಸ್ಪತ್ರೆ ಇದರಿಂದ ವೈದ್ಯಕೀಯ ಕ್ಷೇತ್ರದಲ್ಲಿ ಇನ್ನೊಂದು, ಮತ್ತೊಂದು ಮಹತ್ತರ ಮೈಲಿಗಲ್ಲನ್ನು ಸಾಧಿಸಿದಂತಾಗಿದೆ.

ಎನ್‌ಎಬಿಎಲ್- ರಾಷ್ಟ್ರೀಯ ಮಟ್ಟದ ಸಂಸ್ಥೆ ಆಗಿದ್ದು, ರೋಗನಿರ್ಣಯ ಪ್ರಯೋಗಾಲಯಗಳನ್ನು ಮೌಲ್ಯಮಾಪನ ಮಾಡಿ ಗುಣಮಟ್ಟದ ಸೇವೆ ನೀಡುವ ಸಂಸ್ಥೆಗಳಿಗೆ ಮಾನ್ಯತೆಯ ಪ್ರಶಸ್ತಿ ಪತ್ರವನ್ನು ನೀಡುತ್ತದೆ. ಈ ಮೂಲಕ ಎನ್‌ಎಬಿಎಲ್ ಮಾನ್ಯತೆ ಹೊಂದಿರುವ ಜಿಲ್ಲೆಯ ಪ್ರಥಮ ಹಾಗೂ ಏಕೈಕ ಡಯಾಗ್ನೋಸ್ಟಿಕ್ ಲ್ಯಾಬೋರೇಟರಿ ಆಗಿದೆ.

ಸಂಸ್ಥೆಯ ಪ್ರಾಂಶುಪಾಲ ಡಾ. ಬಿ.ಎಸ್. ಪ್ರಸಾದ್, ವೈದ್ಯಕೀಯ ಅಧ್ಯಕ್ಷ ಡಾ. ಅರುಣ್‌ಕುಮಾರ್ ಅಜ್ಜಪ್ಪ ಅವರ ನೇತೃತ್ವ ಮತ್ತು ಉಪ ಪ್ರಾಂಶುಪಾಲರು ಹಾಗೂ ಪೆಥಾಲಜಿ ವಿಭಾಗದ ಮುಖ್ಯಸ್ಥರಾದ ಡಾ. ಶಶಿಕಲಾ, ಲಾಬೋರೇಟರಿ ನಿರ್ದೇಶಕ ಹಾಗೂ ಬಯೋಕೆಮಿಸ್ಟ್ರಿ ವಿಭಾಗದ ಮುಖ್ಯಸ್ಥ ಡಾ. ಸಿ. ಆರ್. ಮಲ್ಲಿಕಾರ್ಜುನ್, ಮೈಕ್ರೋ ಬಯಾಲಜಿ ವಿಭಾಗದ ಮುಖ್ಯಸ್ಥ ಡಾ. ಜಯಸಿಂಹ, ಕ್ವಾಲಿಟಿ ಮ್ಯಾನೇಜರ್ ಡಾ. ಸತೀಶ್ ಪಾಟೀಲ್, ಸಂಸ್ಥೆಯ ಮ್ಯಾನೇಜರ್ ರವಿ, ಲ್ಯಾಬ್ ವ್ಯವಸ್ಥಾಪಕ ಸಂತೋಷ್‌ಕುಮಾರ್ ಮತ್ತು ಬೋಧಕ-ಬೋಧಕೇತರ ಸಿಬ್ಬಂದಿ, ಅರೆ ವೈದ್ಯಕೀಯ ಸಿಬ್ಬಂದಿ ಹಾಗೂ ತಾಂತ್ರಿಕ ವರ್ಗದ ಸಿಬ್ಬಂದಿಗಳನ್ನು ಅಭಿನಂದಿಸಿದ್ದಾರೆ. ವಿಮಾ ಕಂಪನಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಆರೋಗ್ಯ ಯೋಜನೆ ಫಲಾನುಭವಿಗಳು ಹಾಗೂ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಲು ಮನವಿ ಮಾಡಲಾಗಿದೆ.

# ಚನ್ನಗಿರಿಯಲ್ಲಿ ನಾಳೆ ಲೋಕಾಯುಕ್ತ ಪೊಲೀಸರಿಂದ ಅಹವಾಲು ಸ್ವೀಕಾರ

ಚನ್ನಗಿರಿ, ಫೆ.12- ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಎಂ.ಎಸ್. ಕೌಲಾಪೂರೆ ಅವರ ಅಧ್ಯಕ್ಷತೆಯಲ್ಲಿ ನಾಡಿದ್ದು ದಿನಾಂಕ 14ರ ಬೆಳಿಗ್ಗೆ 11.30ರಿಂದ 1.30ರವರೆಗೆ ಚನ್ನಗಿರಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಾಗುವುದು.


## ಹೃದಯಪೂರ್ವಕ ಕೃತಜ್ಞತೆಗಳು



ನನ್ನನ್ನು ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯ ಜಂಟಿ ಕಾರ್ಯದರ್ಶಿಯಿಂದ ರಾಜ್ಯ ಕಾರ್ಯದರ್ಶಿಯನ್ನಾಗಿ ಪದೋನ್ನತಿ ನೀಡಿದ ಕೆಪಿಸಿಸಿ ಕಾರ್ಮಿಕ ವಿಭಾಗದ ರಾಜ್ಯಾಧ್ಯಕ್ಷರಾದ **ಶ್ರೀ ಕೆ. ಪುಟ್ಟಸ್ವಾಮಿಗೌಡ** ಅವರಿಗೆ, ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಿಗೆ ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರಿಗೆ, ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಿಗೆ ಹಾಗೂ ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಪದಾಧಿಕಾರಿಗಳಿಗೆ **ತುಂಬು ಹೃದಯದ ಕೃತಜ್ಞತೆಗಳು.**






**ದಸ್ತಗೀರ ಎಸ್ ಅಸಾದುಲ್ಲ**
ರಾಜ್ಯ ಕಾರ್ಯದರ್ಶಿ, ಕೆಪಿಸಿಸಿ ಕಾರ್ಮಿಕ ವಿಭಾಗ, 2ನೇ ಮೇನ್, 4ನೇ ಕ್ರಾಸ್, ಆಜಾದ್ ನಗರ, ದಾವಣಗೆರೆ-1. ಮೊ. : 94480 58786



## ವಿನೋಬನಗರದ ಶ್ರೀ ಚೌಡೇಶ್ವರಿ ದೇವಿ ಜಾತ್ರೆಯ ಹಂದರ ಕಂಬದ ಪೂಜಾ ಕಾರ್ಯಕ್ರಮ



ದಿನಾಂಕ : 13-02-2024, ಮಂಗಳವಾರ
ಸಮಯ :
ಬೆಳಿಗ್ಗೆ 10-30 ರಿಂದ 11-30 ರವರೆಗೆ
ಸ್ಥಳ : ಶ್ರೀ ಚೌಡೇಶ್ವರಿ ದೇವಸ್ಥಾನದ ಮುಂಭಾಗ, 1ನೇ ಮೇನ್, ವಿನೋಬನಗರ, ದಾವಣಗೆರೆ.

ಈ ಕಾರ್ಯಕ್ರಮದಲ್ಲಿ ಸಮಸ್ತ ಸದ್ಭಕ್ತರು ಭಾಗವಹಿಸಲು ವಿನಂತಿ.



ಶ್ರೀನಿವಾಸ ದಾಸಕರಿಯಪ್ಪ, ಅಧ್ಯಕ್ಷರು, ಶ್ರೀ ಚೌಡೇಶ್ವರಿ ದೇವಸ್ಥಾನ ಸಮಿತಿ
ಹೆಚ್. ದಿವಾಕರ್ ವಕೀಲರು, ಪ್ರಧಾನ ಕಾರ್ಯದರ್ಶಿ, ಶ್ರೀ ಚೌಡೇಶ್ವರಿ ದೇವಸ್ಥಾನ ಸಮಿತಿ
ಡಿ.ಜಿ. ಮಂಜುನಾಥ (ಚಿಕ್ಕಿ), ವಾಲ್ಮೀಕಿ ಸಮಾಜದ ಮುಖಂಡರು

ಶಾರದಾಂಬ ಸರ್ಕಲ್ ಗೆಳೆಯರ ಬಳಗ

# ತಾ.ಕನ್ನಡ ಸಾಹಿತ್ಯ ಸಮ್ಮೇಳನ : ಜಾಹ್ನವಿಗೆ ಅಧಿಕೃತ ಆಮಂತ್ರಣ



ದಾವಣಗೆರೆ, ಫೆ. 12- ತಾಲ್ಲೂಕಿನ ಹೆಬ್ಬಾಳು ಗ್ರಾಮದ ಶ್ರೀ ರುದ್ರೇಶ್ವರ ಸ್ವಾಮಿ ಮಠದ ಕಲ್ಯಾಣ ಮಂದಿರದಲ್ಲಿ ಇದೇ ದಿನಾಂಕ 27 ರ ಬುಧವಾರ ನಡೆಯುವ ದಾವಣಗೆರೆ ತಾಲ್ಲೂಕು 10 ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವ ನಗರದ ಕಥೆಗಾರ್ತಿ, ಲೇಖಕಿ ಶ್ರೀಮತಿ ಬಿ.ಟಿ. ಜಾಹ್ನವಿ ಅವರನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ವಾಮದೇವಪ್ಪ ನವರ ನೇತೃತ್ವದಲ್ಲಿ ತಾಲ್ಲೂಕು ಕ.ಸಾ.ಪ. ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪನವರ ಅಧ್ಯಕ್ಷತೆಯಲ್ಲಿ ಗೌರವ ಪೂರ್ವಕವಾಗಿ ಕನ್ನಡದ ಪೇಟ, ಶಾಲು ಹಾಕಿ ಅಧಿಕೃತವಾಗಿ ಆಹ್ವಾನಿಸಲಾಯಿತು.

ಈ ಸಂದರ್ಭದಲ್ಲಿ ಸುಮತಿ ಜಯಪ್ಪ ಮಾತನಾಡಿ, ಜಾಹ್ನವಿ ಅವರು ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಸಂತೋಷವಾಗಿದೆ. ಇದರಿಂದ ಮಹಿಳೆಯರಿಗೆ ಗೌರವ ಸಂದಿದೆ ಎಂದು ಶುಭಾಶಯ ಕೋರಿದರು.

ಜಿಲ್ಲಾಧ್ಯಕ್ಷ ಬಿ. ವಾಮದೇವಪ್ಪ ಮಾತನಾಡಿ, ಜಾಹ್ನವಿ ಅವರು ಲೇಖನ, ಕಥೆಗಳ ಮೂಲಕ ಸಮಾಜವನ್ನು ತಿದ್ದುವ, ಮಾರ್ಗ ದರ್ಶನ ಮಾಡುವ ಕೆಲಸ ಮಾಡಿದ್ದಾರೆ, ಇವರು ಬಹುಮುಖ ಪ್ರತಿಭೆಯುಳ್ಳ ಕ್ರಿಯಾಶೀಲ ಬರಹಗಾರರಾಗಿದ್ದಾರೆ. ಇಂತಹವರು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಆಯ್ಕೆಯಾಗಿರುವುದು ಇಡೀ ಸಾಹಿತ್ಯ ವಲಯಕ್ಕೆ ಸಂತೋಷ ತಂದಿದೆ ಹಾಗೂ ಸಮ್ಮೇಳನಕ್ಕೆ ಮೆರಗು ಬಂದಂತಾಗಿದೆ ಎಂದು ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಬಿ.ದಿಳ್ಯಪ್ಪ, ರೇವಣಸಿದ್ದಪ್ಪ ಅಂಗಡಿ, ಸಂಘಟನಾ ಕಾರ್ಯದರ್ಶಿ ಜಿಗಳಿ ಪ್ರಕಾಶ್, ಜಿಲ್ಲಾ ಕ. ಸಾ.ಪ. ಪದಾಧಿಕಾರಿ ಶ್ರೀಮತಿ ಮಲ್ಲಮ್ಮ ರುದ್ರಾಕ್ಷಿಬಾಯಿ, ತಾಲ್ಲೂಕು ಕಸಾಪದ ಗೌರವ ಕಾರ್ಯದರ್ಶಿ ನಾಗರಾಜ್ ಸಿರಿಗೆರೆ, ಷಡಕ್ಷರಪ್ಪ ಎಂ.ಬೇತೂರು, ಶಿವಕುಮಾರ್, ಎ.ಎಂ. ಸಿದ್ದೇಶ್ ಕುರ್ಕಿ, ವೀಣಾ ಕೃಷ್ಣಮೂರ್ತಿ, ನಾಗವೇಣಿ, ಎಸ್. ಸಿದ್ದೇಶಪ್ಪ, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ. ಪರಮೇಶಪ್ಪ, ಸಂಸ್ಕಾರ ಭಾರತಿ ಮಹಾಲಿಂಗಪ್ಪ, ಹರಿಹರ ತಾಲ್ಲೂಕು ಕ.ಸಾ.ಪ ಕಾರ್ಯದರ್ಶಿ ವಿಜಯ ಮಹಾಂತೇಶ, ಹರಿಹರ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಭೂಮೇಶ್ ಮುಂತಾದವರು ಉಪಸ್ಥಿತರಿದ್ದರು.

ಸಿ.ಜಿ ಜಗದೀಶ್ ಸ್ವಾಗತಿಸಿದರು. ದಾಗಿನಕಟ್ಟೆ ಪರಮೇಶಪ್ಪ ನಿರೂಪಿಸಿದರು. ರುದ್ರಾಕ್ಷಿಬಾಯಿ ಪ್ರಾರ್ಥಿಸಿದರು. ಶಿವಕುಮಾರ್ ವಂದಿಸಿದರು.

# ಒಣಕೊಬ್ಬರಿ ಖರೀದಿ ಪ್ರಮಾಣ ಹೆಚ್ಚಿಸಲು ಕ್ರಮ ಕೈಗೊಳ್ಳಿ : ಸಂಸದ ಜಿ.ಎಂ.ಸಿದ್ದೇಶ್ವರ ಮನವಿ



ದಾವಣಗೆರೆ, ಫೆ. 12- ನೆಫೆಡ್ (ನ್ಯಾಷನಲ್ ಅಗ್ರಿಕಲ್ಚರಲ್ ಕೋಆಪರೇಟೀವ್ ಮಾರ್ಕೆಟಿಂಗ್ ಫೆಡರೇಷನ್ ಆಫ್ ಇಂಡಿಯಾ)ಮೂಲಕ ಒಣಕೊಬ್ಬರಿ ಖರೀದಿ ಹೆಚ್ಚಿಸುವಂತೆ ಕೋರಿ ನವದೆಹಲಿಯಲ್ಲಿ ಸಂಸದ ಜಿ.ಎಂ.ಸಿದ್ದೇಶ್ವರ ಅವರು ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ಅವರಿಗೆ ಮನವಿ ಸಲ್ಲಿಸಿದರು.

ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಒಣಕೊಬ್ಬರಿ ಉದ್ಯಮ ಪ್ರಮುಖ ಪಾತ್ರ ವಹಿಸುತ್ತಿರುವುದನ್ನು ಸಚಿವರ ಗಮನಕ್ಕೆ ತಂದಿದ್ದು, ಪ್ರಸ್ತುತ ಕರ್ನಾಟಕದಲ್ಲಿ 62 ಸಾವಿರ ಮೆಟ್ರಿಕ್ ಟನ್ ಒಣಕೊಬ್ಬರಿಯನ್ನು ನೆಫೆಡ್ ಮೂಲಕ ಖರೀದಿ ಮಾಡಲಾಗಿದೆ.

ಇನ್ನೂ 60 ಸಾವಿರ ಮೆಟ್ರಿಕ್ ಟನ್ ಒಣಕೊಬ್ಬರಿ ದಾಸ್ತಾನು ಕೊಬ್ಬರಿ ಮಾರುಕಟ್ಟೆಯಲ್ಲಿ ಹಾಗೂ ಬೆಳೆಗಾರರ ಬಳಿ ಇದೆ. ಇದರಲ್ಲಿ ಕನಿಷ್ಟ 50 ಸಾವಿರ ಮೆಟ್ರಿಕ್ ಟನ್‌ನಷ್ಟು ನೆಫೆಡ್ ಮೂಲಕ ಖರೀದಿಸುವ ಕೆಲಸವಾಗಬೇಕು ಎಂದು ಒತ್ತಾಯಿಸಿದ್ದಾರೆ.

ಖರೀದಿ ಪ್ರಕ್ರಿಯೆಯಲ್ಲಿ ನೋಂದಣಿ ದಿನಾಂಕವನ್ನು ವಿಸ್ತರಣೆ ಮಾಡುವಂತೆ ಸಚಿವರಲ್ಲಿ ಸಂಸದರು ಆಗ್ರಹಿಸಿದ್ದಾರೆ.


## ತೃತೀಯ ವರ್ಷದ ಪುಣ್ಯ ಸ್ಮರಣೆ



**ಶ್ರೀ ಸಣ್ಣ ಗೌಡ್ರ ಭೀಮಪ್ಪನವರು**

ನಿಧನ : 13.02.2021

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು. ನೀವು ಸದಾ ನಮ್ಮ ಅಂತರಂಗದಲ್ಲಿ ನಮ್ಮೊಂದಿಗೆ ಇದ್ದೀರಿ. ನಿಮ್ಮ ಸ್ಮರಣೆಯಲ್ಲಿ, ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿದ್ದೇವೆ.

ಪತ್ನಿ : ಶ್ರೀಮತಿ ಪುಷ್ಪ

ಮಗಳು-ಅಳಿಯ : ಶ್ರೀಮತಿ ಸ್ಮಿತಾ ಶ್ರೀ ಹೆಚ್.ಎಸ್. ಕಿರಣ್

ಮೊಮ್ಮಗ ಚಿ|| ಷಮಂತ್ ಎಸ್.ಕೆ

ಶ್ಯಾಬನೂರು ಗೌಡ್ರ ವಂಶಸ್ಥರು ಮತ್ತು ಬಂಧು-ಮಿತ್ರರು.

ಫೋನ್ : 97408 67411, 98442 21305


# ಸಿಎ ಪರೀಕ್ಷೆ : ಎಸ್.ಬಿ.ಸಿ ಕಾಲೇಜಿನ ನಾಲ್ವರು ವಿದ್ಯಾರ್ಥಿನಿಯರು ಉತ್ತೀರ್ಣ



ದಾವಣಗೆರೆ, ಫೆ.12- ನಗರದ ಎಸ್.ಬಿ.ಸಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ನಾಲ್ವರು ವಿದ್ಯಾರ್ಥಿನಿಯರು ಸಿಎ ಸಂಸ್ಥೆ ನಡೆಸುವ ಪರೀಕ್ಷೆಯಲ್ಲಿ ಕು. ಐಶ್ವರ್ಯ ಶಾನ್‌ಬಾಗ್ ಸಿಎ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕು. ಕೃಪಾ ಕನವಳ್ಳಿ ಸಿಎ ಇಂಟರ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಕು. ಎ.ಪವಿತ್ರ ಸಿಎ ಫೌಂಡೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ರಕ್ಷಾ ಆರ್.ಅಜ್ಜಂಪುರ ಅವರು ಸಿಎ ಇಂಟರ್‌ಮೀಡಿಯೇಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಈ ಎಲ್ಲಾ ವಿದ್ಯಾರ್ಥಿಗಳನ್ನು ಶ್ರೀ ವಿನಾಯಕ ಎಜುಕೇಷನ್ ಟ್ರಸ್ಟಿನ ಮ್ಯಾನೇಜಿಂಗ್ ಟ್ರಸ್ಟಿ ಡಾ. ಅಥಣಿ ವೀರಣ್ಣ, ಕಾರ್ಯದರ್ಶಿ ಎನ್.ಎ. ಮುರುಗೇಶ್, ಕಾಲೇಜಿನ ಅಧ್ಯಕ್ಷ ಬಿ.ಸಿ.ಉಮಾಪತಿ, ವಿನಾಯಕ ಎಜುಕೇಷನ್ ಟ್ರಸ್ಟ್‌ನ ಎಲ್ಲಾ ಸದಸ್ಯರುಗಳು, ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಷಣ್ಮುಖ ಮತ್ತು ಅಧ್ಯಾಪಕರುಗಳು ಹಾಗೂ ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

# ವಿನೋಬನಗರ ಚೌಡೇಶ್ವರಿ ದೇವಿ ಜಾತ್ರೆ ನಗರದಲ್ಲಿ ಇಂದು ಹಂದರ ಕಂಬ ಪೂಜೆ

ವಿನೋಬನಗರದ 1ನೇ ಮುಖ್ಯರಸ್ತೆಯಲ್ಲಿರುವ ಶ್ರೀ ಚೌಡೇಶ್ವರಿ ದೇವಿ ಜಾತ್ರೆ ಬರುವ ಮಾರ್ಚ್ 19 ಮತ್ತು 20ರಂದು ನಡೆಯಲಿದ್ದು, ಈ ಪ್ರಯುಕ್ತ ಹಂದರ ಕಂಬದ ಪೂಜಾ ಕಾರ್ಯಕ್ರಮವನ್ನು ಇಂದು ಬೆಳಿಗ್ಗೆ 10.30 ರಿಂದ 11.30ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಸಮಿತಿಯ ಪರವಾಗಿ ಹೆಚ್. ದಿವಾಕರ್ ತಿಳಿಸಿದ್ದಾರೆ.

# ಮಹಾಮಾರಿ ಕಾಯ್ದೆಯ ಬದಲಾವಣೆಗೆ ಶಿಫಾರಸ್ಸು

ನವದೆಹಲಿ, ಫೆ. 12 – ಮಹಾಮಾರಿ ಕಾಯ್ದೆಯಲ್ಲಿ ಸಾಕಷ್ಟು ಲೋಪಗಳಿವೆ ಎಂದು ಹೇಳಿರುವ ಕಾನೂನು ಆಯೋಗ, ಈ ಕಾಯ್ದೆಗೆ ವ್ಯಾಪಕ ತಿದ್ದುಪಡಿ ತರಬೇಕು ಇಲ್ಲವೇ ಹೊಸ ಕಾಯ್ದೆ ರೂಪಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ನಿವೃತ್ತ ನ್ಯಾಯಮೂರ್ತಿ ರಿತು ರಾಜ್ ಅವಸ್ಥಿ ನೇತೃತ್ವದ ಆಯೋಗವು ಕೇಂದ್ರ ಸರ್ಕಾರಕ್ಕೆ ಈ ಕುರಿತ ವರದಿ ಸಲ್ಲಿಸಿದೆ. ಇದರಲ್ಲಿ ಕೊರೊನಾ ಅವಧಿಯಲ್ಲಿ ಆದ ಪರಿಣಾಮಗಳ ಬಗ್ಗೆಯೂ ವಿವರ ನೀಡಲಾಗಿದೆ.


## ಹೃದಯಪೂರ್ವಕ ಕೃತಜ್ಞತೆಗಳು

ಮಾನ್ಯ ಮತದಾರ ಬಾಂಧವರೇ,

ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್‌ನ ಆಡಳಿತ ಮಂಡಳಿಯ ಚುನಾವಣೆಯು ದಿನಾಂಕ : 11.02.2024ರಂದು ನಡೆದಿದ್ದು, ಈ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ನಮಗೆ ಮತದಾನ ಮಾಡಿದ ಬ್ಯಾಂಕಿನ ಎಲ್ಲಾ ಮತದಾರ ಬಾಂಧವರಿಗೆ ಹೃದಯಪೂರ್ವಕ ಕೃತಜ್ಞತೆಗಳು. ಚುನಾವಣೆ ಸಂದರ್ಭದಲ್ಲಿ ನಮ್ಮೊಂದಿಗೆ ಹಗಲಿರುಳು ಶ್ರಮಿಸಿದ ಗುರು-ಹಿರಿಯರಿಗೂ, ಸ್ನೇಹಿತರಿಗೂ, ಬಂಧುಗಳಿಗೂ, ವ್ಯಾಪಾರಸ್ಥರಿಗೂ, ಪ್ರತ್ಯಕ್ಷ-ಪರೋಕ್ಷವಾಗಿ ಸಹಕರಿಸಿದ ಪ್ರತಿಯೊಬ್ಬರಿಗೂ ಧನ್ಯವಾದಗಳು. ನಿಮ್ಮ ಪ್ರೀತಿಯ ವಿಶ್ವಾಸಕ್ಕೆ ಸದಾ ಚಿರಋಣಿ.



ಗುರುರಾಜ್ ಎನ್.ಎ.
(ನಾಗೂರು ಅಡಿವೆಪ್ಪನವರ ಮಗ)
ಎಪಿಎಂಸಿ ಮಾಜಿ ನಿರ್ದೇಶಕರು,
ಫೋ. : 93438 12345

ಬೆಳ್ಳೂಡಿ ಮಂಜುನಾಥ್
(ಮುದ್ದಳ್ಳಿ ವೀರಣ್ಣನವರ ಮಗ)
ಫೋ. : 99722 85497





